ಸಂಪಾದಕರು :
ಎಂ.ಎಸ್. ವಿಕಾಸ್

ಶನಿವಾರ, ಜನವರಿ 13, 2024
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 241 RNI : 27369/75

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

1974 2023

janathavani@mac.com
www.janathavani.com
08192 254736 91642 99999



ವಿವೇಕಾನಂದರು

ಸ್ವಾಮಿ ವಿವೇಕಾನಂದ ಜಯಂತಿ ಅಂಗವಾಗಿ ವಿವೇಕಾನಂದರ ವೇಷ ತೊಟ್ಟ ಮಕ್ಕಳು ದಾವಣಗೆರೆ ಜಯದೇವ ವೃತ್ತದಲ್ಲಿ ಫೋಟೋಗೆ ಪೋಸ್ ಕೊಟ್ಟಿದ್ದು ಹೀಗೆ.

# ಯುವನಿಧಿಗೆ ಚಾಲನೆ

## ನಿರುದ್ಯೋಗ ಸಮಸ್ಯೆಗೆ ಉದ್ಯೋಗ ಮೇಳ: ಸಿಎಂ

ಶಿವಮೊಗ್ಗ, ಜ. 12 - ನಿರುದ್ಯೋಗ ಸಮಸ್ಯೆ ಬಗೆಹರಿಸಲು ರಾಜ್ಯದೆಲ್ಲೆಡೆ ಉದ್ಯೋಗ ಮೇಳಗಳನ್ನು ಏರ್ಪಡಿಸಿ ದೇಶ - ವಿದೇಶಗಳಲ್ಲಿ ನಮ್ಮ ಯುವಜನರಿಗೆ ಉದ್ಯೋಗ ಕಲ್ಪಿಸುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಿಸಿದ್ದಾರೆ.

ದಶಕದ ಹಿಂದೆ ನೂರಕ್ಕೆ ಐದು ಮಂದಿ ನಿರುದ್ಯೋಗಿಗಳಾಗಿದ್ದರೆ, ಇಂದು ಅದರ ಪ್ರಮಾಣ ಶೇ.10.5ಕ್ಕೆ ಹೆಚ್ಚಳವಾಗಿದೆ, ಇದರಿಂದ ಯುವ ಸಮುದಾಯ ಆತಂಕ ಸ್ಥಿತಿಯಲ್ಲಿದೆ ಎಂದವರು ಹೇಳಿದರು. ಇದನ್ನು ಮನಗಂಡು ನಾವು ಪದವಿ ಹಾಗೂ ಡಿಪ್ಲೋಮಾ ಪಡೆದ ನಿರುದ್ಯೋಗಿಗಳಿಗೆ ಯುವನಿಧಿ ಯೋಜನೆ ಜಾರಿಗೆ ತಂದು ಮಾಸಿಕ 3,000 ಹಾಗೂ 1,500 ರೂ. ಉದ್ಯೋಗ ಭತ್ಯೆ ನೀಡುತ್ತಿದ್ದೇವೆ ಎಂದು ತಿಳಿಸಿದರು.

ಶಿವಮೊಗ್ಗದಲ್ಲಿ ಸರ್ಕಾರದ ಐದು ಮತ್ತು ಕೊನೆಯ ಗ್ಯಾರಂಟಿ ಯುವನಿಧಿ ಯೋಜನೆಗೆ ಚಾಲನೆ ನೀಡಿ ಮಾತನಾಡಿದ ಅವರು, ಉದ್ಯೋಗ ಭತ್ಯೆ ಪಡೆಯುವ ಸಂದರ್ಭದಲ್ಲೇ ಕೌಶಲ್ಯ ತರಬೇತಿ ನೀಡಿ, ದೇಶ-ವಿದೇಶಗಳಲ್ಲಿ ಉದ್ಯೋಗ ಕಲ್ಪಿಸಲಾಗುವುದು ಎಂದರು.

ಚುನಾವಣಾ ಪೂರ್ವ ಪ್ರಣಾಳಿಕೆಯಲ್ಲಿ ಘೋಷಿಸಿದಂತೆ ಐದು ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದಿದ್ದೇವೆ. ನಿರುದ್ಯೋಗ (3ನೇ ಪುಟಕ್ಕೆ)

> **ನಿರುದ್ಯೋಗ ಸಮಸ್ಯೆಯಿಂದ ನಮ್ಮ ಯುವಕ-ಯುವತಿಯರು ಭ್ರಮನಿರಸನರಾಗಿದ್ದಾರೆ. ಅವರ ಭವಿಷ್ಯಕ್ಕೆ ಶಕ್ತಿ ತುಂಬಲು ಈ ಯೋಜನೆಯನ್ನು ಕಾಂಗ್ರೆಸ್ ಸರ್ಕಾರ ಜಾರಿಗೊಳಿಸಿದೆ.**
> **- ಸಿದ್ದರಾಮಯ್ಯ, ಮುಖ್ಯಮಂತ್ರಿ**

# ಮಹಿಳಾ ಮೀಸಲಾತಿ ಜಾರಿ : ತ್ವರಿತ ವಿಚಾರಣೆಗೆ ಸುಪ್ರೀಂ ನಕಾರ



ನವದೆಹಲಿ, ಜ. 12 – ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಮಹಿಳೆಯರಿಗೆ ಶೇ.33ರಷ್ಟು ಮೀಸಲಾತಿ ಕಲ್ಪಿಸಬೇಕು ಎಂಬ ಅರ್ಜಿಯ ಕಾಲಬದ್ಧ ವಿಚಾರಣೆ ನಡೆಸಬೇಕು ಎಂಬ ಮನವಿಯನ್ನು ಸುಪ್ರೀಂ ಕೋರ್ಟ್ ತಳ್ಳಿ ಹಾಕಿದೆ.

ಲೋಕಸಭಾ ಚುನಾವಣೆ ಸನಿಹದಲ್ಲೇ ಇದೆ. ಈ ಚುನಾವಣೆಯಲ್ಲಿ ಮಹಿಳೆಯರಿಗೆ ಶೇ.33ರಷ್ಟು ಮೀಸಲಾತಿ ಕಲ್ಪಿಸುವ ಸಲುವಾಗಿ, ತ್ವರಿತವಾಗಿ ವಿಚಾರಣೆ ನಡೆಸಬೇಕು. 2023ರ ಮಹಿಳಾ ಮೀಸಲಾತಿ ಕಾಯ್ದೆಯನ್ನು ಅನಿಶ್ಚಿತ ರೀತಿಯಲ್ಲಿ ಜಾರಿಗೆ ತರಲಾಗಿದೆ ಎಂದು ವಕೀಲ ಎಂ.ಜಿ. ಯೋಗಮಾಯ ಅರ್ಜಿ ದಾಖಲಿಸಿದ್ದರು.

ಆದರೆ, ತ್ವರಿತ ವಿಚಾರಣೆಗೆ ಸುಪ್ರೀಂ ಕೋರ್ಟ್ ಸಮ್ಮತಿಸಲಿಲ್ಲ. ನಂತರ ಯೋಗಮಾಯ ತಮ್ಮ ಅರ್ಜಿಯನ್ನು ವಾಪಸ್ ಪಡೆದರು.

# ಶ್ರೀಮತಿ ಶಕುಂತಲಮ್ಮ ನಿಧನ



ದಾವಣಗೆರೆ ತಾಲ್ಲೂಕು ಬೆಳವನೂರು ಗ್ರಾಮದ
ಹೆಚ್.ಎಸ್.ಮಂಜುನಾಥ್ ಅವರ ಧರ್ಮಪತ್ನಿ

## ಶ್ರೀಮತಿ ಶಕುಂತಲಮ್ಮ

ಇವರು ದಿನಾಂಕ 12.1.2024ರ ಶುಕ್ರವಾರ ರಾತ್ರಿ 9.40ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 57 ವರ್ಷ ವಯಸ್ಸಾಗಿತ್ತು. ಪತಿ, ಓರ್ವ ಪುತ್ರ, ಓರ್ವ ಪುತ್ರಿ, ಸೊಸೆ, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 13.1.2024ರ ಶನಿವಾರ ಮಧ್ಯಾಹ್ನ 12-30ಕ್ಕೆ ಬೆಳವನೂರು ಗ್ರಾಮದ ಮೃತರ ಸ್ವಂತ ಜಮೀನಿನಲ್ಲಿ ನೆರವೇರಲಿದೆ.

**ದು:ಖತಪ್ತ ಕುಟುಂಬ ವರ್ಗ**
**ಹೆಚ್.ಎಸ್.ಮಂಜುನಾಥ ಮತ್ತು ಮಕ್ಕಳು, ಸಹೋದರರು, ಸಹೋದರಿಯರು ಹಾಗೂ ಬಂಧು-ಮಿತ್ರರು.**

# ಕನ್ನಡ ನಾಮಫಲಕ ಹಾಕದಿದ್ದರೆ ಲೈಸನ್ಸ್ ರದ್ದು



ದಾವಣಗೆರೆ, ಜ.12- ರಾಜ್ಯ ಸರ್ಕಾರದ ನಿರ್ದೇಶನದಂತೆ ನಾಮ ಫಲಕದಲ್ಲಿ ಶೇ.60ರಷ್ಟು ಕನ್ನಡ ಇರದಿದ್ದರೆ ದಂಡ ವಿಧಿಸುವ ಜೊತೆಗೆ, ಟ್ರೇಡಿಂಗ್ ಲೈಸನ್ಸನ್ನೂ ರದ್ದುಗೊಳಿಸಲಾಗುವುದು ಎಂದು ಮಹಾನಗರ ಪಾಲಿಕೆ ಆಯುಕ್ತರಾದ ರೇಣುಕಾ ಹೇಳಿದರು.

ಶುಕ್ರವಾರ ಪಾಲಿಕೆ ಸಭಾಂಗಣದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕನ್ನಡ ಹೊರತಾಗಿ ಬೇರೆ ಭಾಷೆಯ ನಾಮಫಲಕಗಳಿಗೆ ಮಸಿ ಬಳಿಯಲಾಗಿದೆ. ಜೊತೆಗೆ ದಂಡ ವಿಧಿಸುವ ಎಚ್ಚರಿಕೆಯನ್ನೂ ನೀಡಲಾಗಿದೆ.

ಈ ತಿಂಗಳೊಳಗೆ ನಾಮಫಲಕ ದಲ್ಲಿ ಶೇ. 60ರಷ್ಟು ಕನ್ನಡ ಇರುವಂತೆ ನೋಡಿಕೊಳ್ಳಬೇಕು. ಇಲ್ಲದಿದ್ದರೆ ಪಾಲಿಕೆಯಿಂದ ದಂಡ ವಿಧಿಸಲಾಗುವುದು. ನಂತರವೂ ನಿರ್ಲಕ್ಷ್ಯ ಮಾಡಿದರೆ ಟ್ರೇಡ್ ಲೈಸನ್ಸ್ ರದ್ದುಗೊಳಿಸ ಲಾಗುವುದು ಎಂದು ಹೇಳಿದರು.

> **ಮಹಾನಗರ ಪಾಲಿಕೆ ಆಯುಕ್ತೆ ರೇಣುಕಾ ಎಚ್ಚರಿಕೆ**
> **ಮಳಿಗೆ, ಕಟ್ಟಡ ಮಾಲೀಕರಿಗೆ ತಿಂಗಳ ಗಡುವು**

**ಎಲ್ಲೆಂದರಲ್ಲಿ ಕಸ ಹಾಕಿದರೆ ದಂಡ:** ನಗರವನ್ನು ಸ್ವಚ್ಛವಾಗಿಡಲು ಹಲವು ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆ. ಕಳೆದ ಡಿಸೆಂಬರ್‌ನಿಂದ ಕಸವನ್ನು ವಿಂಗಡಿಸಿ ನೀಡದ ಹಾಗೂ ಎಲ್ಲೆಂದರಲ್ಲಿ ಕಸ ಹಾಕುವವರಿಗೆ 500ರೂ.ಗಳಿಂದ 10 ಸಾವಿರ ರೂ.ವರೆಗೂ ದಂಡ ವಿಧಿಸಲಾಗುತ್ತಿದೆ. ಡಿಸೆಂಬರ್ ತಿಂಗಳಲ್ಲಿ 908 ಪ್ರಕರಣಗಳನ್ನು ದಾಖಲಿಸಿಕೊಂಡು 3.5ಲಕ್ಷ ರೂ. ದಂಡ ವಸೂಲಿ ಮಾಡಲಾಗಿದೆ (3ನೇ ಪುಟಕ್ಕೆ)

# ರೈಲ್ವೆ ಪ್ರಯಾಣಿಕರಿಗೆ ವಿನಾಯಿತಿ

ಅಹಮದಾಬಾದ್, ಜ. 12 - ಪ್ರತಿಯೊಬ್ಬ ರೈಲ್ವೆ ಪ್ರಯಾಣಿಕನಿಗೆ ಶೇ.55ರ ವಿನಾಯಿತಿ ನೀಡಲಾಗುತ್ತಿದೆ ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಹೇಳಿದ್ದಾರೆ. ಕೊರೊನಾ ಪೂರ್ವದ ದಿನಗಳಂತೆ ಹಿರಿಯ ನಾಗರಿಕರು ಹಾಗೂ ಮಾಧ್ಯಮದವರಿಗೆ ವಿನಾಯಿತಿ ನೀಡಬೇಕೆಂಬ ಪ್ರಶ್ನೆಗೆ ಅವರು ಈ ಉತ್ತರ ನೀಡಿದ್ದಾರೆ. ವಿನಾಯಿತಿ ಜಾರಿಗೆ ತರುವ ಪ್ರಶ್ನೆಗೆ ನೇರ (3ನೇ ಪುಟಕ್ಕೆ)

# ಆಕಾಶ್ ಕ್ಷಿಪಣಿ ಪರೀಕ್ಷೆ ಯಶಸ್ವಿ

ಬಾಲಸೋರ್, ಜ. 12 – ಒಡಿಶಾ ಕರಾವಳಿಯ ಚಂಡಿಪುರದಲ್ಲಿ ಹೊಸ ಪೀಳಿಗೆಯ ಆಕಾಶ್ ಕ್ಷಿಪಣಿಯ ಪರೀಕ್ಷೆ ನಡೆಸಲಾಗಿದ್ದು, ಇದು ಯಶಸ್ವಿಯಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಡಿ.ಆರ್.ಡಿ.ಒ. ತಳ ಹಂತದಲ್ಲಿ ಈ ಪರೀಕ್ಷೆ ನಡೆಸಿತ್ತು. ಆಕಾಶ್ ತನ್ನ ಗುರಿಯನ್ನು ಯಶಸ್ವಿಯಾಗಿ ತಲುಪಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

# ವೈಕುಂಠ ಸಮಾರಾಧನೆ ಆಹ್ವಾನ



ಬೆಂಗಳೂರು ಸಿಟಿ ವಾಸಿ
ಶ್ರೀಮತಿ ಅಕ್ಕಮ್ಮ ಇವರ ಪತಿ

## ಶ್ರೀ ಎಂ.ಎಂ. ಪೊನ್ನಪ್ಪನವರು

(84 ವರ್ಷ)

ಇವರು ತಮ್ಮ ಸ್ವಗೃಹದಲ್ಲಿ ದಿನಾಂಕ : 05.01.2024 ರಂದು ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರು ಪತ್ನಿ, ಓರ್ವ ಪುತ್ರ, ಸೊಸೆ, ಮೊಮ್ಮಗ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುತ್ತಾರೆ. ಮೃತರ

**'ವೈಕುಂಠ ಸಮಾರಾಧನೆ'ಯನ್ನು**

**ದಿನಾಂಕ : 13.01.2024ನೇ ಶನಿವಾರ ಬೆಂಗಳೂರು ಕನ್ನಿಂಗ್ ಹ್ಯಾಮ್ ರಸ್ತೆಯಲ್ಲಿರುವ ಸಂಪಿಗೆ ರಾಮ ಮಂದಿರದಲ್ಲಿ ನಡೆಸಲು**
ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿಸುತ್ತೇವೆ.

**ಇಂತಿ ದುಃಖತಪ್ತ ಕುಟುಂಬ ವರ್ಗ :**
**ಶ್ರೀಮತಿ ಅಕ್ಕಮ್ಮ, ಉತ್ತಪ್ಪ, (ರೋಹನ್) ಆರಾಧನ**

# ಬೆಳಲಗೆರೆ ಹಾಲಸಿದ್ದಪ್ಪ ನಿಧನ



ದಾವಣಗೆರೆ ಜಿಲ್ಲೆ, ಹರಿಹರ ತಾಲ್ಲೂಕು ಮಿಟ್ಲಕಟ್ಟೆ ವಾಸಿ

## ಬೆಳಲಗೆರೆ ಹಾಲಸಿದ್ದಪ್ಪ

(90 ವರ್ಷ)

**ಭದ್ರ ಸಹಕಾರಿ ಸಕ್ಕರೆ ಕಾರ್ಖಾನೆ ಮಾಜಿ ಅಧ್ಯಕ್ಷರು**

ಇವರು ದಿನಾಂಕ : 12.01.2024ರ ಶುಕ್ರವಾರ ಸಂಜೆ 5.00 ಘಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರು ನಾಲ್ಕು ಜನ ಗಂಡು ಮಕ್ಕಳು, 3 ಜನ ಹೆಣ್ಣು ಮಕ್ಕಳು, ಮೊಮ್ಮಕ್ಕಳು, ಮರಿ ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.
ಮೃತರ ಅಂತ್ಯಕ್ರಿಯೆಯನ್ನು ಚನ್ನಗಿರಿ ತಾಲ್ಲೂಕು ಬೆಳಲಗೆರೆ ಗ್ರಾಮದಲ್ಲಿ ಇಂದು ಮಧ್ಯಾಹ್ನ (13.01.2024) 1.00 ಗಂಟೆಗೆ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ಇಂತಿ ದುಃಖತಪ್ತ ಕುಟುಂಬ ವರ್ಗ**
**ಫೋ. : 99809 74416, 93421 54886, 97405 78933**

# ಮಾಗಾನಹಳ್ಳಿ ನಿಜಾನಂದಪ್ಪ ನಿಧನ



ದಾವಣಗೆರೆ ಎಸ್.ಎಸ್. ಬಡಾವಣೆ ವಾಸಿ
ಆನಂದ ಹಾರ್ಡ್‌ವೇರ್ಸ್ ಅಂಡ್ ಪೇಂಟ್ಸ್ ಮಾಲೀಕರೂ
ಛೇಂಬರ್ ಆಫ್ ಕಾಮರ್ಸ್ ಉಪಾಧ್ಯಕ್ಷರೂ
ವಿನಾಯಕ ಎಜ್ಯುಕೇಶನ್ ಟ್ರಸ್ಟ್ ಉಪಾಧ್ಯಕ್ಷರೂ
ಅಭಿನವ ರೇಣುಕಾ ಮಂದಿರದ ಟ್ರಸ್ಟಿಗಳೂ ಆದ

## ಮಾಗಾನಹಳ್ಳಿ ನಿಜಾನಂದಪ್ಪ

ಇವರು ದಿನಾಂಕ 12.1.2024ರ ಶುಕ್ರವಾರ ಮಧ್ಯಾಹ್ನ 3 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 86 ವರ್ಷ ವಯಸ್ಸಾಗಿತ್ತು. ಪತ್ನಿ, ಓರ್ವ ಪುತ್ರ, ಮೂವರು ಪುತ್ರಿಯರು, ಸೊಸೆ, ಅಳಿಯಂದಿರು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಪಾರ್ಥಿವ ಶರೀರವನ್ನು ಸಾರ್ವಜನಿಕರ ಅಂತಿಮ ದರ್ಶನಕ್ಕಾಗಿ ನಗರದ ಕೆ.ಬಿ. ಬಡಾವಣೆಯಲ್ಲಿರುವ ಮೃತರ ತಮ್ಮನ ಸ್ವಗೃಹದಲ್ಲಿ (ಸ್ಟೀಲ್ ಕಾರ್ಪೋರೇಷನ್ ಹತ್ತಿರ) ದಿನಾಂಕ 13.1.2024ರ ಶನಿವಾರ ಮಧ್ಯಾಹ್ನ 3 ಗಂಟೆಯವರೆಗೆ ಅಂತಿಮ ದರ್ಶನಕ್ಕೆ ಇಡಲಾಗುವುದು. ನಂತರ ಅಂತ್ಯಕ್ರಿಯೆಯನ್ನು ನಗರದ ಬೂದಾಳ್ ರಸ್ತೆಯಲ್ಲಿರುವ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ, ಮೊ :94480 69242**

# ವಿದೇಶದಲ್ಲಿ ಸನಾತನ ಧರ್ಮ ಎತ್ತಿ ಹಿಡಿದ ಪುರುಷ ಸಿಂಹ ವಿವೇಕಾನಂದ

## ಹರಪನಹಳ್ಳಿ : ಸ್ವಾಮಿ ವಿವೇಕಾನಂದರ ಜಯಂತ್ಯೋತ್ಸವದಲ್ಲಿ ಪ್ರಾಂಶುಪಾಲ ಡಾ.ಎಂ. ಸುರೇಶ್

ಹರಪನಹಳ್ಳಿ, ಜ. 12 - ಸ್ವಾಮಿ ವಿವೇಕಾನಂದರು ಸನಾತನ ಧರ್ಮವನ್ನು ಇಡೀ ವಿಶ್ವಕ್ಕೆ ಮುಟ್ಟಿಸುವಂತಹ ಕೆಲಸವನ್ನು ಮಾಡಿದ್ದಾರೆ ಎಂದು ಪ್ರಾಂಶುಪಾಲ ಡಾ.ಎಂ. ಸುರೇಶ್ ಹೇಳಿದರು.

ತಾಲ್ಲೂಕಿನ ಅರಸೀಕೆರೆ ಗ್ರಾಮದ ಶ್ರೀ ಕೋಲಶಾಂತೇಶ್ವರ ಜನಕಲ್ಯಾಣ ಕೇಂದ್ರದ ವತಿಯಿಂದ ಸ್ವಾಮಿ ವಿವೇಕಾನಂದರ ಜಯಂತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ದೇಶವನ್ನು ಬ್ರಿಟಿಷರಿಂದ ಮುಕ್ತಗೊಳಿಸಿದ್ದಾರೆ. ಬ್ರಿಟೀಷರ ವಿರುದ್ಧ ಹೋರಾಟ ಮಾಡಲು ಯುವಕರನ್ನು ಹುರಿದುಂಬಿಸಿ ಉಕ್ಕಿನ ಮನುಷ್ಯರನ್ನಾಗಿ ಮಾಡಿದ್ದಾರೆ.

ಈ ದೇಶ ಬದಲಾಗಬೇಕಾದರೆ ಅದು ಯುವಕರಿಂದ ಮಾತ್ರ ಸಾಧ್ಯ ಎಂದು ಸಾರಿ ದ್ದಾರೆ. ಈ ದಿನ ರಾಷ್ಟ್ರೀಯ ಯುವ ದಿನವನ್ನಾಗಿ ಆಚರಣೆ



ಮಾಡುತ್ತಿದ್ದೇವೆ. ಯುವಕರು ಗುರಿ ಮುಟ್ಟುವ ತನಕ ಹೋರಾಟ ಮಾಡಬೇಕು ಆದರೆ ಇಂದಿನ ದಿನಗಳ ಯುವಕರಲ್ಲಿ ಗುರಿ ಯಿಲ್ಲ. ಕೇವಲ ಟಿ.ವಿ., ಮೊಬೈಲ್‌ಗೆ ಮಾರು ಹೋಗಿದ್ದಾರೆ. ಒಳ್ಳೆಯ ಶಿಕ್ಷಣ ಪಡೆದು ದೇಶಕ್ಕೆ, ತಂದೆ-ತಾಯಿಗೆ, ಗುರುಗಳಿಗೆ, ಸಮಾ ಜಕ್ಕೆ ಒಳ್ಳೆಯ ಪ್ರಜೆಗಳಾಗಬೇಕು. ಸ್ವಾಮಿ ವಿವೇಕಾ ನಂದರ ತತ್ವ ಸಿದ್ಧಾಂತಗಳನ್ನು ವಿದ್ಯಾರ್ಥಿಗಳು ಮೈಗೂಡಿಸಿಕೊಳ್ಳಬೇಕೆಂದು ಹೇಳಿದರು.

ಆಡಳಿತ ಮಂಡಳಿಯ ಸಲಹೆಗಾರ ವೃಷಭೇಂದ್ರಯ್ಯ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಸ್ವಾಮಿ ವಿವೇಕಾನಂದರ ಜೀವನ ಮತ್ತು ವಿಚಾರಗಳ ಮೂಲಕ ಯುವಕರನ್ನು ಪ್ರೇರೇಪಿಸಿ, ಆ ಮೂಲಕ ದೇಶದ ಉತ್ತಮ ಭವಿಷ್ಯವನ್ನು ರೂಪಿಸುವುದು ಸರ್ಕಾರದ ಮುಖ್ಯ ಉದ್ದೇಶವಾಗಿದೆ. ತಮ್ಮ ಸಂದೇಶಗಳ ಮೂಲಕ ಯುವಕರನ್ನು ಬಡಿದೆಚ್ಚರಿಸಿ, ದೇಶ ಕಟ್ಟುವ ಕಾಯಕದಲ್ಲಿ ತೊಡಗುವಂತೆ ವಿವೇಕಾನಂದರು ಕರೆ ನೀಡಿದ್ದರು. ಅವರ ತತ್ವಗಳನ್ನು ಪಾಲಿಸುವಂತೆ ಮಾಡುವುದು ಈ ದಿನದ ಮುಖ್ಯ ಉದ್ದೇಶವಾಗಿದೆ ಎಂದರು.

ಜಿ.ವಿ.ವಿ.ಡಿ.ಎಸ್. ಪ್ರಾಥಶಾಲೆಯ ಶಿಕ್ಷಕಿ ಜಿ.ಮಂಜಳ ಮಾತನಾಡಿ, ಸ್ವಾಮಿ ವಿವೇಕಾನಂದರು ಭಾರತದ ಧಾರ್ಮಿಕ ಸಮಗ್ರತೆ, ಸಂಸ್ಕೃತಿ ಹಾಗೂ ಸಹಿಷ್ಣುತೆಯನ್ನು ಎತ್ತಿ ಹಿಡಿದಿದ್ದಾರೆ. ಅಮೇರಿಕಾದ ಚಿಕಾಗೋ ವಿಶ್ವ ಧರ್ಮ ಸಮ್ಮೇಳನದಲ್ಲಿ ಸನಾತನ ಧರ್ಮದ ಬಗ್ಗೆ ಭಾಷಣ ಮಾಡಿ ಇಡೀ ವಿಶ್ವಕ್ಕೆ ಮಾದರಿಯಾಗಿದ್ದಾರೆ. ಸ್ವಾಮಿ ವಿವೇಕಾನಂದರು 'ಏಳಿರಿ ಎದ್ದೇಳಿರಿ ಗುರು ಮುಟ್ಟುವ ತನಕ ನಿಲ್ಲದಿರಿ' ಎಂಬ ನುಡಿ ಸಂದೇಶವನ್ನು ಯುವಕರಿಗೆ ಮನ ಮುಟ್ಟುವಂತೆ ಬಡಿದೆಬ್ಬಿಸಿದ್ದಾರೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಕಾರ್ಯದರ್ಶಿ ಇಟಿಗಿಹಳ್ಳಿ ಬಸವರಾಜ್, ಐ.ಟಿ.ಐ. ಕಾಲೇಜಿನ ಪ್ರಾಂಶುಪಾಲರಾದ ನಾರನಗೌಡ, ಪಿಯುಸಿ. ಕಾಲೇಜಿನ ಪ್ರಾಂಶುಪಾಲರಾದ ಸಿದ್ದೇಶ್ವರ್, ಮಾದಿಹಳ್ಳಿ ಶಾಲೆಯ ಶಿಕ್ಷಕ ಮಂಜುನಾಥ್, ಜಿ.ಮಂಜುಳಾ, ಮುಖ್ಯ ಶಿಕ್ಷಕ ಬಸವರಾಜ್ ಮತ್ತು ಇತರರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

## 6 ಮಹಿಳಾ ನ್ಯಾಯಮೂರ್ತಿಗಳು ವಜಾ : ಸುಪ್ರೀಂನಿಂದ ಪರಿಶೀಲನೆ

ನವದೆಹಲಿ, ಜ. 12 – ಅತೃಪ್ತಿಕರ ಕಾರ್ಯನಿರ್ವಹಣೆ ಹಿನ್ನೆಲೆಯಲ್ಲಿ ಆರು ಮಹಿಳಾ ಸಿವಿಲ್ ನ್ಯಾಯಮೂರ್ತಿಗಳನ್ನು ಮಧ್ಯ ಪ್ರದೇಶ ಸರ್ಕಾರ ವಜಾಗೊಳಿಸಿರುವುದನ್ನು ಸುಪ್ರೀಂ ಕೋರ್ಟ್ ಪರಿಗಣಿಸಿದೆ.

ಆರು ಮಾಜಿ ನ್ಯಾಯಮೂರ್ತಿಗಳ ಪೈಕಿ ಮೂವರು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದ್ದಾರೆ. ಇದನ್ನು ರಿಟ್ ಅರ್ಜಿಯ ರೀತಿ ಪರಿಗಣಿಸಲಾಗುವುದು ಎಂದು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಾದ ಬಿ.ವಿ. ನಾಗರತ್ನ ಹಾಗೂ ಸಂಜಯ್ ಕರೋಲ್ ಅವರನ್ನು ಒಳಗೊಂಡ ಪೀಠ ಹೇಳಿದೆ.

ಈ ಪ್ರಕರಣದಲ್ಲಿ ಸಹಕರಿಸಲು ವಕೀಲ ಗೌರವ್ ಅಗರ್‌ವಾಲ್ ಅವರನ್ನು ಅಮಿಕಸ್ ಕ್ಯೂರಿ ಆಗಿ ಪೀಠ ನೇಮಿಸಿದೆ.

ಕೊರೊನಾ ಸಮಯದಲ್ಲಿ ನ್ಯಾಯಮೂರ್ತಿಗಳ ಗುಣಾತ್ಮಕ ಕೆಲಸದ ಪರಾಮರ್ಶೆ ಸಾಧ್ಯವಿಲ್ಲದಿದ್ದರೂ ವಜಾ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಸುಪ್ರೀಂ ಕೋರ್ಟ್‌ನನಲ್ಲಿ ಅರ್ಜಿ ದಾಖಲಿಸಲಾಗಿದೆ.

ಜೂನ್ 2023ರಂದು ರಾಜ್ಯ ಕಾನೂನು ಇಲಾಖೆಯು ವಜಾಗೊಳಿಸುವ ಆದೇಶ ಹೊರಡಿಸಿತ್ತು.

ಆಡಳಿತಾತ್ಮಕ ಸಮಿತಿ ಹಾಗೂ ಪೂರ್ಣ ನ್ಯಾಯಾಲಯ ಭೇಟಿಯ ನಂತರ ಈ ಕ್ರಮ ತೆಗೆದುಕೊಳ್ಳಲಾಗಿತ್ತು.

## ಮಲೇಬೆನ್ನೂರಿನಲ್ಲಿ 15ರಂದು ಸಂಕ್ರಾಂತಿ



ಮಲೇಬೆನ್ನೂರು, ಜ.12- ಪಟ್ಟಣದ ಹೊರ ವಲಯದಲ್ಲಿರುವ ಶ್ರೀ ಭದ್ರಾಕಾಳಿ ಸಮೇತ ಶ್ರೀ ವೀರಭದ್ರೇಶ್ವರ ದೇವಸ್ಥಾನದಲ್ಲಿ ಇದೇ ದಿನಾಂಕ 15ರ ಸೋಮವಾರ ಮಕರ ಸಂಕ್ರಾಂತಿ ಪ್ರಯುಕ್ತ ವಿಶೇಷ ಪೂಜಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಅಂದು ಪ್ರಾಥಃಕಾಲದಲ್ಲಿ ಎಲ್ಲಾ ದೇವರುಗಳಿಗೆ ಅಭಿಷೇಕ, ಬೆಳಿಗ್ಗೆ 8 ರಿಂದ 10.30ರವರೆಗೆ ಶ್ರೀ ಆದಿತ್ಯ ಸೂರ್ಯ ನಾರಾಯಣ ಹೋಮ, ಪೂರ್ಣಾವತಿ ಮಾಡಲಾಗುವುದು.

ಸಂಜೆ 5 ರಿಂದ 7.30 ರವರೆಗೆ ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜೆಯನ್ನು ಏರ್ಪಡಿಸಲಾಗಿದೆ ಎಂದು ದೇವಸ್ಥಾನ ಸಮಿತಿ ಉಪಾಧ್ಯಕ್ಷ ಬಿ. ಚಿದಾನಂದಪ್ಪ ತಿಳಿಸಿದ್ದಾರೆ. ಅಂದು ಬೆಳಿಗ್ಗೆಯಿಂದ ರಾತ್ರಿ 9 ಗಂಟೆವರೆಗೂ ಸಂಕ್ರಾಂತಿ ವಿಶೇಷತೆಯ ಅನ್ನ ಸಂತರ್ಪಣೆ ಇರುತ್ತದೆ.

## ನ್ಯಾಮತಿ ಬಳಿ ಅಪರಿಚಿತನ ಶವ ಪತ್ತೆ

ನ್ಯಾಮತಿ, ಜ. 12 - ಕೆಂಚಿಕೊಪ್ಪ ಗ್ರಾಮದ ಸಮೀಪ ಅಪರಿಚಿತ ಪುರುಷ ಕುಳಿತ ಜಾಗದಲ್ಲೇ ಕುಸಿದು ಮೃತ ಪಟ್ಟಿರುತ್ತಾನೆ. ತೆಳುವಾದ ಮೈಕಟ್ಟು, ಎಣ್ಣೆಕಪ್ಪು ಮೈಬಣ್ಣ, ಬಿಳಿ ಕೂದಲು, ಕೋಲು ಮುಖ ಇರುತ್ತದೆ. ಸಂಬಂಧಪಟ್ಟವರು ನ್ಯಾಮತಿ ಠಾಣೆ (94808 03264, 99722 99234, 80733 71548) ಯನ್ನು ಸಂಪರ್ಕಿಸಬಹುದು.

## 'ಯುವ ನಿಧಿ' ಐತಿಹಾಸಿಕ ಕಾರ್ಯಕ್ರಮಗಳಲ್ಲೊಂದು



### ಹೊನ್ನಾಳಿ ಶಾಸಕ ಶಾಂತನಗೌಡ ಬಣ್ಣನೆ

ಹೊನ್ನಾಳಿ, ಜ.12- ನಾಡಿನ ವಿದ್ಯಾವಂತ ನಿರುದ್ಯೋಗಿಗಳಿಗೆ ನೌಕರಿ ಸಿಗುವವರೆಗೆ ಯುವ ನಿಧಿ ಯೋಜನೆಯಡಿ ನಿರುದ್ಯೋಗ ಭತ್ಯೆಯನ್ನು ಇಂದಿನಿಂದ ನೀಡಲಾಗುತ್ತಿದೆ. ಅರ್ಹ ವಿದ್ಯಾರ್ಥಿಗಳು ಸದುಪಯೋಗ ಪಡಿಸಿಕೊಳ್ಳುವಂತೆ ಶಾಸಕ ಡಿ.ಜಿ.ಶಾಂತನಗೌಡ ಕರೆ ನೀಡಿದರು.

ಪಟ್ಟಣದ ಪ್ರಥಮ ದರ್ಜೆ ಕಾಲೇಜಿನ ಆವರಣದಲ್ಲಿ ಶಿವಮೊಗ್ಗಕ್ಕೆ ವಿದ್ಯಾರ್ಥಿಗಳನ್ನು ಕೊಂಡೊಯ್ಯುತ್ತಿದ್ದ ಬಸ್‌ಗಳಿಗೆ ಹಸಿರು ನಿಶಾನೆ ತೋರಿಸಿ ಅವರು ಮಾತನಾಡಿದರು.

ಸ್ವಾಮಿ ವಿವೇಕಾನಂದರ ಜನ್ಮ ದಿನವಾದ ಇಂದು ರಾಷ್ಟ್ರೀಯ ಯುವ ದಿನದ ಅಂಗವಾಗಿ ಯುವ ನಿಧಿಯ ಫಲಾನುಭವಿಗಳಿಗೆ ಹಣ ವರ್ಗಾವಣೆ ಮಾಡುವ ಮಹತ್ವದ ಕಾರ್ಯಕ್ರಮ ದೇಶದ ಇತಿಹಾಸದ ಪುಟಗಳಲ್ಲಿ ದಾಖಲಾಗಲಿದೆ ಎಂದರು.

ನೀಡಿದ ಐದೂ ಭರವಸೆಗಳನ್ನೂ ಈಡೇರಿಸಿ ಸರ್ವರ ಹಿತಕಾಯುವ ಏಕೈಕ ಪಕ್ಷ ಕಾಂಗ್ರೆಸ್ ಪಕ್ಷವೆಂದು ಈ ಕಾರ್ಯಕ್ರಮದ ಮೂಲಕ ಮತ್ತೊಮ್ಮೆ ಸಾಬೀತು ಮಾಡಿದೆ ಎಂದು ಬಣ್ಣಿಸಿದರು. ಸರ್ಕಾರಿ ಪದವಿ ಕಾಲೇಜಿನ 350, ಎಸ್.ಎಂ.ಎಫ್.ಸಿ. ಕಾಲೇಜಿನ 100 ಮತ್ತು ಸಾಸ್ವೆಹಳ್ಳಿಯ ಎಡಿವಿಎಸ್ ಕಾಲೇಜಿನ 50 ಒಟ್ಟು 500 ವಿದ್ಯಾರ್ಥಿಗಳು 10 ಬಸ್‌ಗಳಲ್ಲಿ ಶಿವಮೊಗ್ಗ ಕಡೆಗೆ ತಮ್ಮ ಪ್ರಯಾಣ ಬೆಳೆಸಿದರು.

ಈ ಸಂದರ್ಭದಲ್ಲಿ ತಹಶೀಲ್ದಾರ್ ಪಟ್ಟರಾಜೇಗೌಡ, ತಾಪಂ ಇಒ ಎಚ್.ವಿ. ರಾಘವೇಂದ್ರ, ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ. ಬಿ.ಜಿ. ಧನಂಜಯ, ಹಿರಿಯ ಉಪನ್ಯಾಸಕ ಡಿ.ಸಿ.ಪಾಟೀಲ್, ದೈಹಿಕ ಶಿಕ್ಷಕ ಹರೀಶ್, ಕಾಲೇಜುಗಳ ಉಪನ್ಯಾಸಕರು ಮತ್ತು ಸಿಬ್ಬಂದಿಗಳು ಉಪಸ್ಥಿತರಿದ್ದರು.


ಚಿತ್ರ : ಜಿಗಳಿ ಪ್ರಕಾಶ್

ಭತ್ತದ ನಾಟಿ ಆರಂಭ...

ಮಲೇಬೆನ್ನೂರು ಸಮೀಪದ ದೇವರಬೆಳಕೆರೆ ಪಿಕಪ್ ಡ್ಯಾಮ್ ನೀರಿನಿಂದ ಜರೆಕಟ್ಟೆ, ಮುದಹದಡಿ, ಬಟ್ಲಕಟ್ಟೆ, ಸಂಕ್ಲೀಪುರ, ದೇವರಬೆಳಕೆರೆ, ಬೂದಿಹಾಳ್, ಕುಣಿಬೆಳಕೆರೆ ಮತ್ತಿತರರೆ ಗ್ರಾಮಗಳ ರೈತರು ಬೇಸಿಗೆ ಹಂಗಾಮಿನ ಭತ್ತದ ನಾಟಿ ಮಾಡುವ ಕಾರ್ಯ ಆರಂಭಿಸಿದ್ದು, ಶುಕ್ರವಾರ ಜರೆಕಟ್ಟೆ ರೈತರು ನಾಟಿ ಮಾಡುವ ದೃಶ್ಯ ಕ್ಯಾಮರಾ ಕಣ್ಣಿಗೆ ಸೆರೆ ಸಿಕ್ಕಿತು. ಜ. 20 ರಿಂದ ಭದ್ರಾ ನಾಲೆಗೆ ನೀರು ಬಿಡುಗಡೆ ಆಗಲಿದ್ದು, ಆ ಸಂದರ್ಭದಲ್ಲಿ ಸ್ವಂತ ಬೋರ್ ವೆಲ್ ಇರುವ ರೈತರು ಭತ್ತದ ನಾಟಿ ಮಾಡುವ ಸಾಧ್ಯತೆ ಇದೆ.

## ಬಸವರಾಜ ಕೆಪಿಸಿಸಿ ಪದವೀಧರ ಕಾರ್ಯದರ್ಶಿ

ಹರಪನಹಳ್ಳಿ, ಜ. 12 - ಕೆಪಿಸಿಸಿ ಪದವೀಧರ ತಾಲ್ಲೂಕು ಸಂಘಟನಾ ಕಾರ್ಯದರ್ಶಿಯಾಗಿ ಸಿಂಗ್ರಿಹಳ್ಳಿ ಟಿ. ಬಸವರಾಜ ನೇಮಕಗೊಂಡಿದ್ದಾರೆ.




## 18ನೇ ವರ್ಷದ ಪುಣ್ಯಸ್ಮರಣೆ




**ಎಸ್.ಎಸ್. ಮಂಜುನಾಥ್ M.A (ಕಬಡ್ಡಿ ಮಂಜು)**

(ಇನ್ಸ್‌ಪೆಕ್ಟರ್ ಆಫ್ ಸೆಂಟ್ರಲ್ ಎಕ್ಸೈಜ್ & ಕಸ್ಟಮ್ಸ್) ದಾವಣಗೆರೆ. (ನಿಧನ 13.01.2006)

*ನೀವು ನಮ್ಮನ್ನಗಲಿ 18 ವರ್ಷಗಳಾದರೂ, ನಿಮ್ಮ ನೆನಪು ನಮ್ಮ ಹೃದಯದಲ್ಲಿ ಸದಾ ಹಸಿರಾಗಿದೆ. ನಿಮ್ಮ ಸ್ಮರಣೆಯೇ ನಮಗೆ ದಾರಿ ದೀಪ...*

ಶ್ರೀಮತಿ ಶೈಲಜಾ ಮಂಜುನಾಥ್ ಗೋಪನಾಳು, ಮಗ-ನೂತನ್ ಕುಮಾರ್
ಮೋಹನ್‌ರಾಜು ಜಿ.ಎಸ್. ಮತ್ತು ಸಹೋದರರು, ಸಹೋದರಿಯರು, ಶ್ಯಾಮೇನಹಳ್ಳಿ ಬಂಧು-ಮಿತ್ರರು, ಗೋಪನಾಳು,
ಟಿ. ದ್ಯಾಮಪ್ಪ ಮತ್ತು ಮಕ್ಕಳು, ಹೂವಿನಹಡಗಲಿ.
ಬಿ.ಇ. ಶಿವಕುಮಾರ್ ನಿವೃತ್ತ E.E., ಮತ್ತು ಸಹೋದರರು, ಮರವಂಜಿ.
ಸೃಷ್ಟಿ ಕಬಡ್ಡಿ ಅಕಾಡೆಮಿ ಸದಸ್ಯರು, ಮಿತ್ರರು ಮತ್ತು ಕ್ರೀಡಾ ಪಟುಗಳು, ದಾವಣಗೆರೆ.


## ನಾರಾಯಣರಾವ್ ಪಿಸಾಳೆ ನಿಧನ



ದಾವಣಗೆರೆ ಪಿಸಾಳೆ ಕಾಂಪೌಂಡ್ ವಾಸಿ ನಾರಾಯಣರಾವ್ ಪಿಸಾಳೆ ಅವರು ದಿನಾಂಕ 12-1-2024ರ ಶುಕ್ರವಾರ ಸಂಜೆ 4 ಗಂಟೆಗೆ ನಿಧನರಾದರು. ಪತ್ನಿ, ನಾಲ್ಕು ಜನ ಪುತ್ರರು, ಓರ್ವ ಪುತ್ರಿ, ಅಳಿಯ, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ : 13-1-2024ರ ಶನಿವಾರ ಬೆಳಿಗ್ಗೆ 10-30ಕ್ಕೆ ನಗರದ ಪಿ.ಬಿ. ರಸ್ತೆಯಲ್ಲಿರುವ ವೈಕುಂಠ ಧಾಮದಲ್ಲಿ ನೆರವೇರಲಿದೆ.

## ಅಂಬರೀಶ್ ರಾವ್ ಒಂಟಿಮಾರ್ ನಿಧನ



ದಾವಣಗೆರೆ ಆಂಜನೇಯ ಬಡಾವಣೆ ವಾಸಿ ಸಿಂಡಿಕೇಟ್ ಬ್ಯಾಂಕ್ ನಿವೃತ್ತ ನೌಕರ, ದಾವಣಗೆರೆ ಅಶ್ವತ್ಥಪುರ ದೇಶಸ್ತ ಬ್ರಾಹ್ಮಣ ಸಮಾಜದ ಉಪಾಧ್ಯಕ್ಷರಾಗಿದ್ದ ಅಂಬರೀಶ್ ರಾವ್ ಒಂಟಿಮಾರ್ (74) ಇವರು ದಿನಾಂಕ 12.1.2024ರ ಗುರುವಾರ ರಾತ್ರಿ 8.30ಕ್ಕೆ ಬೆಂಗಳೂರಿನಲ್ಲಿ ನಿಧನರಾದರು. ಓರ್ವ ಪುತ್ರ, ಇಬ್ಬರು ಪುತ್ರಿಯರು ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಂತ್ಯಕ್ರಿಯೆಯು ದಿನಾಂಕ 12.1.2024ರ ಶುಕ್ರವಾರ ಮಧ್ಯಾಹ್ನ 2 ಗಂಟೆಗೆ ನೆರವೇರಿತು.

## ಹರಿಹರ : ಕಾಂಗ್ರೆಸ್ ಪಕ್ಷವನ್ನು ಬಲಪಡಿಸಲು ಕರೆ

ಹರಿಹರ, ಜ.12- ನಿಷ್ಠೆಯಿಂದ ಕಾಂಗ್ರೆಸ್ ಪಕ್ಷವನ್ನು ಬಲಪಡಿಸಿ, ಗೆಲ್ಲಿಸಿ. ಆದರೆ, ಪಕ್ಷಕ್ಕೆ ಮೋಸ ಮಾಡಿದರೆ ಯಾವುದೇ ಫಲಗಳನ್ನು ಪಡೆಯಲು ಕಷ್ಟವಾಗುತ್ತದೆ ಎಂದು ವಿಧಾನ ಪರಿಷತ್ತಿನ ಆಗ್ನೇಯ ಶಿಕ್ಷಕರ ಕ್ಷೇತ್ರದ ಅಭ್ಯರ್ಥಿ ಡಿ.ಟಿ.ಶ್ರೀನಿವಾಸ್ ಅಭಿಪ್ರಾಯ ಪಟ್ಟರು.



ನಗರದ ವಿವಿಧ ಶಾಲೆಗಳಿಗೆ ಭೇಟಿ ನೀಡಿ ನಂತರ ಬ್ಲಾಕ್ ಕಾಂಗ್ರೆಸ್ ಕಚೇರಿಯಲ್ಲಿ ಪಕ್ಷದ ಮುಖಂಡರಿಂದ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

ಕಾಂಗ್ರೆಸ್ ಪಕ್ಷ ಈ ಕ್ಷೇತ್ರದಲ್ಲಿ ಒಮ್ಮೆಯೂ ಗೆಲ್ಲಲಿಲ್ಲ. ಆದರೆ, ಈ ಬಾರಿ ಗೆಲ್ಲುತ್ತದೆ. ಕಾರಣ ಪಕ್ಷ ಸರ್ಕಾರಿ ನೌಕರರಿಗೆ ಒಲ್ಡ್ ಪಿಂಚಣಿ ಸೇರಿದಂತೆ, ಅನೇಕ ಸೌಲಭ್ಯ ಒದಗಿಸಲು ಬದ್ಧವಾಗಿದೆ.

ಕಾಂಗ್ರೆಸ್ ಪಕ್ಷದ ಯೋಜನೆಗಳನ್ನು ಪಕ್ಷದ ಕಾರ್ಯಕರ್ತರು ಪ್ರಚಾರ ಮಾಡಬೇಕು. ಅದು ತಮ್ಮ ತಮ್ಮ ಮನೆಯಿಂದ ಪ್ರಾರಂಭ ಮಾಡಿ ಪಕ್ಷವನ್ನು ನಾವು ಬಲಪಡಿಸಿದರೆ ಪಕ್ಷ ನಮಗೆ ರಕ್ಷಣೆ ನೀಡುತ್ತದೆ ಎಂದು ಅವರು ಹೇಳಿದರು.

ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಎಲ್.ಬಿ. ಹನುಮಂತಪ್ಪ, ಎಂ.ಬಿ.ಅಬಿದ್ ಅಲಿ, ಮುಖಂಡರಾದ ಸತೀಶ್ ನಂದಿಗಾವಿ, ನಗರಸಭೆ ಸದಸ್ಯ ಬಾಬುಲಾಲ್, ಶಾಹಿನಾ ದಾದಾಪೀರ್, ಸಂತೋಷ್ ನೋಟದ, ಉಮ್ಮರ್, ಇಸ್ಮಾಯಿಲ್, ಆಶ್ರಯ ಸಮಿತಿ ಸದಸ್ಯ ಶಂಭು ಮೆಹರ್ವಾಡೆ. ಆರೋಗ್ಯ ರಕ್ಷ ಸಮಿತಿ ಸದಸ್ಯ ಹಬೀಬ್, ಖುದ್ದೂಸ್, ವಿಜಯ, ಪ್ರಕಾಶ್, ಇಬ್ರಾಹಿಂ ಆರ್ ಇದ್ದರು.


## ಭಾವಪೂರ್ಣ ಶ್ರದ್ಧಾಂಜಲಿ

ದಿನಾಂಕ 12.01.2024ರಂದು ಸಂಜೆ 4 ಗಂಟೆಗೆ ದೈವಾಧೀನರಾದ
ದಾವಣಗೆರೆ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯ ಹಿರಿಯ ಉಪಾಧ್ಯಕ್ಷರಾದ

**ಶ್ರೀ ಎಂ.ಹೆಚ್. ನಿಜಾನಂದ**



ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.
ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

**ದಾವಣಗೆರೆ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ**
ಐನಳ್ಳಿ ಚನ್ನಬಸಪ್ಪ ಅಂಡ್ ಸನ್ಸ್ ಬಿಲ್ಡಿಂಗ್, ಮಂಡಿಪೇಟೆ, ದಾವಣಗೆರೆ.

✦ ಶ್ರೀ ಶಾಮನೂರು ಶಿವಶಂಕರಪ್ಪ ಗೌರವಾಧ್ಯಕ್ಷರು ✦ ಶ್ರೀ ಯಾಜಮಾನ್ ಮೋತಿವೀರಣ್ಣ ಅಧ್ಯಕ್ಷರು ✦ ಶ್ರೀ ಅಥಣಿ ವೀರಣ್ಣ, ಉಪಾಧ್ಯಕ್ಷರು
✦ ಶ್ರೀ ಅಜ್ಜಂಪುರಶೆಟ್ರು ಶಂಭುಲಿಂಗಪ್ಪ, ಕಾರ್ಯದರ್ಶಿ ✦ ಶ್ರೀ ಕಿರುವಾಡಿ ಸೋಮಶೇಖರ್, ಜಂಟಿ ಕಾರ್ಯದರ್ಶಿ ✦ ಶ್ರೀ ಟಿ.ಎಸ್. ಜಯರುದ್ರೇಶ್, ಖಜಾಂಚಿಗಳು

ಆಡಳಿತ ಮಂಡಳಿ ಸದಸ್ಯರುಗಳು

✦ ಶ್ರೀ ಬಿ.ಮಲ್ಲಿಕಾರ್ಜುನ ಸ್ವಾಮಿ ✦ ಶ್ರೀ ಕೋಗುಂಡಿ ಬಕ್ಕೇಶಪ್ಪ ✦ ಶ್ರೀ ಎಸ್.ಟಿ. ಕುಸುಮಶೆಟ್ಟಿ ✦ ಶ್ರೀ ಜಿ.ಎಸ್ ಪರಮೇಶ್ವರ್ ಗೌಡ್ರು ✦ ಶ್ರೀ ಕೆ. ಜಾವೀದ್ ಸಾಬ್ ✦ ಶ್ರೀ ಬಿ.ಸಿ. ಉಮಾಪತಿ ✦ ಶ್ರೀ ಅಂದನೂರು ಮುಪ್ಪಣ್ಣ ✦ ಶ್ರೀ ಜಂಬಗಿ ರಾಜೇಶ್ ✦ ಶ್ರೀ ಬಿ.ಜಿ. ಬಸವರಾಜಪ್ಪ ✦ ಶ್ರೀ ಕಾಸಲ್ ಬದ್ರಿನಾಥ್ ✦ ಶ್ರೀ ಎ.ಬಿ. ಷಡಾಕ್ಷರಪ್ಪ ✦ ಶ್ರೀ ಐ.ಡಿ. ನಾಗರಾಜ್ ✦ ಶ್ರೀ ಬಿ.ಹೆಚ್.ಎಂ. ಪ್ರಕಾಶ್ ✦ ಶ್ರೀ ಗುಂಡಿ ರಾಜಶೇಖರ್ ಮತ್ತು ಸಂಸ್ಥೆಯ ಸರ್ವ ಸದಸ್ಯರುಗಳು.

ಆಹ್ವಾನಿತರು : ಎಸ್.ಕೆ. ಶ್ರೀಧರ್ ಮತ್ತು ಕೆ.ಜಿ. ರಾಜಣ್ಣ.

## ಭಾವಪೂರ್ಣ ಶ್ರದ್ಧಾಂಜಲಿ

ದಿನಾಂಕ 12-1-2024ರಂದು ನಿಧನರಾದ
ಭದ್ರ ಸಹಕಾರಿ ಸಕ್ಕರೆ ಕಾರ್ಖಾನೆ ಮಾಜಿ ಅಧ್ಯಕ್ಷರಾದ
**ಶ್ರೀ ಬೆಳಲಗೆರೆ ಹಾಲಸಿದ್ದಪ್ಪ**
ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.
ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.



ದುಃಖತಪ್ತ ಪುತ್ರಿಯರು ಮತ್ತು ಅಳಿಯಂದಿರಾದ
✦ ಶ್ರೀಮತಿ ಲೀಲಾ ಮತ್ತು ಎಸ್. ಓಂಕಾರಪ್ಪ, ವಲಯ ಅಧ್ಯಕ್ಷರು, ಲಯನ್ಸ್ ಕ್ಲಬ್, ದಾವಣಗೆರೆ.
✦ ಶ್ರೀಮತಿ ಇಂದಿರಾ ಮತ್ತು ಎಸ್.ಎನ್. ತಿಪ್ಪೇಸ್ವಾಮಿ, ಅಧ್ಯಕ್ಷರು, ಹೋಲ್‌ಸೇಲ್ ತರಕಾರಿ ವರ್ತಕರ ಸಂಘ
✦ ಶ್ರೀಮತಿ ರುದ್ರಮ್ಮ ಮತ್ತು ಟಿ.ಪಿ. ಮಂಜುನಾಥ್, ಮಂಜು ಗಾರ್ಮೆಂಟ್ಸ್, ದಾವಣಗೆರೆ.

## 11ನೇ ವರ್ಷದ ಪುಣ್ಯಸ್ಮರಣೆ



**ಡಿ.ಎಲ್. ಲೆಕ್ಕದಪ್ಪ**
ನಿಧನ : 13.01.2013
ನೀವು ನಮ್ಮನ್ನಗಲಿ ಇಂದಿಗೆ 11 ವರ್ಷಗಳಾದವು. ನಿಮ್ಮ ಆದರ್ಶ ಮತ್ತು ನಡೆ ನುಡಿಯೇ ನಮಗೆ ದಾರಿ ದೀಪವಾಗಿವೆ. ಸದಾ ನಿಮ್ಮ ಸ್ಮರಣೆಯಲ್ಲಿರುವ...

*ಜೀವನ ಕಲಿಸಿದ ಪಾಠಕ್ಕಿಂತಲೂ ಜೊತೆಯಲ್ಲಿದ್ದು ಹೋದವರು, ರಕ್ತ ಹಂಚಿಕೊಂಡು ಹುಟ್ಟಿದವರು ಸೃಷ್ಟಿಸಿದ ಪ್ರಸಂಗಗಳೇ ಕಲಿಸಿ-ತಿಳಿಸಿದ್ದು ಹೆಚ್ಚು... ನಾನೇಕೆ ಬದಲಾದೆ ಎಂದು ಕೇಳಬೇಡಿ, ನಾನು ಬದಲಾಗುವಂತಹ ಕೆಲಸ ನೀವೇನೂ ಮಾಡಿದ್ರಿ.... ಎಂದು ನಿಮ್ಮನ್ನೇ ನೀವು ಕೇಳಿಕೊಳ್ಳಿ....*
- ದಾಲೆಬ

ಪುತ್ರ : ಬಸವರಾಜೇಂದ್ರ, ಲೆಕ್ಕದ
ಸೊಸೆ : ಸುಧಾ ಬಸವರಾಜೇಂದ್ರ
ಮೊಮ್ಮಕ್ಕಳಾದ : ಚಿನ್ಮಯ್ ಬಿ. ಲೆಕ್ಕದ್, ಚಿಂತನ ಬಿ. ಲೆಕ್ಕದ್,
99720 89722, 91132 03775, ದಾವಣಗೆರೆ.


KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

## ಸಂಕ್ಷಿಪ್ತ ಸುದ್ದಿ

**ಲೋಕಸಭೆಯಲ್ಲಿ ಗೆಲ್ಲಿಸದ ಸಚಿವರ ತಲೆದಂಡ : ಪರಮೇಶ್ವರ್**
ಬೆಂಗಳೂರು: ಲೋಕಸಭಾ ಚುನಾವಣೆಗೆ ಗೆಲ್ಲಲು ಹೈಕಮಾಂಡ್ ಪ್ರತಿ ಸಚಿವರಿಗೆ ಜವಾಬ್ದಾರಿ ನೀಡಿದೆ. ಲೋಕಸಭಾ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಯನ್ನು ಗೆಲ್ಲಿಸದ ಸಚಿವರ ತಲೆದಂಡ ಆಗಲಿದೆ ಎಂಬ ಎಚ್ಚರಿಕೆಯನ್ನು ಹೈಕಮಾಂಡ್ ಕೊಟ್ಟಿದೆ ಎಂದು ಗೃಹ ಸಚಿವ ಜಿ. ಪರಮೇಶ್ವರ್ ಹೇಳಿದ್ದಾರೆ.

**ನೇಮಕಾತಿ ಹಗರಣ : ಪಶ್ಚಿಮ ಬಂಗಾಳದಲ್ಲಿ ಜಾರಿ ನಿರ್ದೇಶನಾಲಯದ ದಾಳಿ**
ಕೊಲ್ಕೊತಾ : ನಗರ ಸ್ಥಳೀಯ ಸಂಸ್ಥೆಗಳ ನೇಮಕಾತಿಯಲ್ಲಿ ಆದ ಹಗರಣಕ್ಕೆ ಸಂಬಂಧಿಸಿದಂತೆ ಪಶ್ಚಿಮ ಬಂಗಾಳದ ಸಚಿವ ಸುಜಿತ್ ಬೋಸ್ ಹಾಗೂ ಶಾಸಕ ತಪಸ್ ರಾಯ್ ಮತ್ತು ನಗರ ಪಾಲಿಕೆಯ ಮಾಜಿ ಅಧ್ಯಕ್ಷ ಸುಬೋಧ್ ಚಕ್ರವರ್ತಿ ನಿವಾಸಗಳ ಮೇಲೆ ಜಾರಿ ನಿರ್ದೇಶನಾಲಯ ದಾಳಿ ನಡೆಸಿದೆ.

**ಅಯೋಧ್ಯೆ ಪ್ರಾಣ ಪ್ರತಿಷ್ಠಾಪನೆಗಾಗಿ ವ್ರತ ಆರಂಭಿಸಿದ ಮೋದಿ**
ನವದೆಹಲಿ : ಅಯೋಧ್ಯೆಯಲ್ಲಿ ಜನವರಿ 22ರಂದು ರಾಮ ಮಂದಿರದ ಪ್ರಾಣ ಪ್ರತಿಷ್ಠಾಪನೆ ನೆರವೇರಲಿರುವ ಹಿನ್ನೆಲೆಯಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು 11 ದಿನಗಳ ವ್ರತವನ್ನು ಆರಂಭಿಸಿದ್ದಾರೆ. ಈ ಬಗ್ಗೆ ತಿಳಿಸಿರುವ ಪ್ರಧಾನಿ ಮೋದಿ, ನನ್ನ ಜೀವನದಲ್ಲಿ ಎಂದೂ ಆಗದ ಅನುಭೂತಿ ಈಗ ಆಗುತ್ತಿದೆ ಎಂದು ತಿಳಿಸಿದ್ದಾರೆ.

**ಮೂವರು ಕಾಂಗ್ರೆಸ್ ಸಂಸದರಿಂದ ವಿಷಾದ; ಅಮಾನತ್ತು ವಾಪಸ್ ಸಾಧ್ಯತೆ**
ನವದೆಹಲಿ : ಕಳೆದ ಲೋಕಸಭಾ ಅಧಿವೇಶನದ ವೇಳೆ ಲೋಕಸಭಾಧ್ಯಕ್ಷರ ವೇದಿಕೆಯವರೆಗೆ ನುಗ್ಗಿದ್ದಕ್ಕಾಗಿ ಕಾಂಗ್ರೆಸ್ ಸದಸ್ಯರಾದ ಅಬ್ದುಲ್ ಖಾಲೀಕ್, ಜೆ. ಜಯಕುಮಾರ್ ಹಾಗೂ ವಿಜಯಕುಮಾರ್ ವಸಂತ್ ವಿಷಾದ ವ್ಯಕ್ತಪಡಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಅವರ ವಿರುದ್ಧದ ಅಮಾತ್ತು ವಾಪಸ್ ಪಡೆಯುವಂತೆ ಲೋಕಸಭೆಯ ಹಕ್ಕು ಸಮಿತಿ ಶಿಫಾರಸ್ಸು ಮಾಡುವ ಸಾಧ್ಯತೆ ಇದೆ. ಕಳೆದ ಚಳಿಗಾಲದ ಅಧಿವೇಶನದ ವೇಳೆ ಲೋಕಸಭೆಯ 100 ಸಂಸದರನ್ನು ಅಮಾನತ್ತುಗೊಳಿಸಲಾಗಿತ್ತು. 97 ಸಂಸದರನ್ನು ಚಳಿಗಾಲದ ಅಧಿವೇಶನದವರೆಗೆ ಮಾತ್ರ ಅಮಾನತ್ತುಗೊಳಿಸಲಾಗಿತ್ತು. ಉಳಿದ ಮೂವರು ಗಂಭೀರ ವರ್ತನೆ ತೋರಿದ ಕಾರಣಕ್ಕಾಗಿ ಹಕ್ಕು ಸಮಿತಿ ಪರಿಶೀಲನೆಗೆ ವಹಿಸಲಾಗಿತ್ತು.

**ಅಯೋಧ್ಯೆ ಭದ್ರತೆಗಾಗಿ 10 ಸಾವಿರ ಸಿ.ಸಿ.ಟಿ.ವಿ.**
ಲಖ್ನೌ : ಅಯೋಧ್ಯೆಯ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮಕ್ಕೆ ಬಿಗಿ ಭದ್ರತೆ ಒದಗಿಸಲಾಗುತ್ತಿದೆ. ಉತ್ತರ ಪ್ರದೇಶ ಪೊಲೀಸರು ರಕ್ಷಣೆಗಾಗಿ ಡ್ರೋನ್ ಹಾಗೂ 10 ಸಾವಿರ ಸಿ.ಸಿ.ಟಿ.ವಿ. ಅಳವಡಿಸಲು ನಿರ್ಧರಿಸಿದ್ದಾರೆ. ಅಲ್ಲದೇ, ಅನಧಿಕೃತ ಡ್ರೋನ್‌ಗಳನ್ನು ತಡೆಯಲು ಡ್ರೋನ್ ನಿರೋಧಕ ವ್ಯವಸ್ಥೆಯನ್ನೂ ಅಳವಡಿಸಲಾಗುವುದು.

**ಚಿಲ್ಲರೆ ಹಣದುಬ್ಬರ ಶೇ.5.69ಕ್ಕೆ ಏರಿಕೆ**
ನವದೆಹಲಿ : ಚಿಲ್ಲರೆ ಹಣದುಬ್ಬರ ಕಳೆದ ಡಿಸೆಂಬರ್ ತಿಂಗಳಲ್ಲಿ ನಾಲ್ಕು ತಿಂಗಳಲ್ಲೇ ಅತಿ ಹೆಚ್ಚಿನ ಶೇ.5.69ಕ್ಕೆ ತಲುಪಿದೆ. ಆಹಾರ ವಸ್ತುಗಳ ಬೆಲೆ ಏರಿಕೆ ಇದಕ್ಕೆ ಪ್ರಮುಖ ಕಾರಣ. 2023ರ ನವೆಂಬರ್‌ನಲ್ಲಿ ಚಿಲ್ಲರೆ ಹಣದುಬ್ಬರ ಶೇ.5.55ರಷ್ಟಿತ್ತು. ಆಗಸ್ಟ್ ತಿಂಗಳಲ್ಲಿ ಶೇ.6.83ರಷ್ಟಿತ್ತು.

**ಮೂರು ಬ್ಯಾಂಕ್‌ಗಳಿಗೆ 2.49 ಕೋಟಿ ರೂ. ದಂಡ**
ಮುಂಬೈ : ನಿಯಂತ್ರಕ ನಿಯಮಗಳನ್ನು ಉಲ್ಲಂಘಿಸಿದ ಕಾರಣಕ್ಕಾಗಿ ಧನಲಕ್ಷ್ಮಿ ಬ್ಯಾಂಕ್, ಪಂಜಾಬ್ ಮತ್ತು ಸಿಂಧ್ ಬ್ಯಾಂಕ್ ಹಾಗೂ ಇ.ಎಸ್.ಎ.ಎಫ್. ಸ್ಮಾಲ್ ಫೈನಾನ್ಸ್ ಬ್ಯಾಂಕ್‌ಗಳಿಗೆ ರಿಸರ್ವ್ ಬ್ಯಾಂಕ್ ದಂಡ ವಿಧಿಸಿದೆ. ಈ ಮೂರು ಬ್ಯಾಂಕ್‌ಗಳಿಗೆ ಒಟ್ಟಾರೆ 2.49 ಕೋಟಿ ರೂ.ಗಳ ದಂಡ ವಿಧಿಸಲಾಗಿದೆ.

# ಅಂದು ಹಗರಣಗಳ ಸುದ್ದಿ, ಇಂದು ಯೋಜನೆಗಳು ಕಾರ್ಯಗತ

ಮುಂಬೈ, ಜ. 12 – ಹಿಂದಿನ ಸರ್ಕಾರದ ಅವಧಿಯಲ್ಲಿ ಬೃಹತ್ ಹಗರಣಗಳು ಸುದ್ದಿ ಮಾಡುತ್ತಿದ್ದವು. ತಮ್ಮ ಸರ್ಕಾರದ ಅವಧಿಯಲ್ಲಿ ಬೃಹತ್ ಯೋಜನೆಗಳು ಕಾರ್ಯಗತವಾಗುತ್ತಿವೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ.

ಮುಂಬೈನಲ್ಲಿ 17,480 ಕೋಟಿ ರೂ. ವೆಚ್ಚದ ಅಟಲ್ ಸೇತುವೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು. ಇದು ದೇಶದ ಅತಿ ದೊಡ್ಡ ಸಮುದ್ರ ಸೇತುವೆಯಾಗಿದೆ.

ಡಿಸೆಂಬರ್ 24, 2016ರಲ್ಲಿ ನಾನು ಇಲ್ಲಿಗೆ ಬಂದಾಗ ಯೋಜನೆಗೆ ಶಿಲಾನ್ಯಾಸ ನೆರವೇರಿಸಿದ್ದೆ. ಈ ಯೋಜನೆಗೆ ಸಾಕಷ್ಟು ಅಡ್ಡಿಗಳು ಎದುರಾಗಿದ್ದವು. ಕೊರೊನಾ ನಡುವೆಯೂ ಈ ಯೋಜನೆಯನ್ನು ಪೂರ್ಣಗೊಳಿಸಲಾಗಿದೆ ಎಂದು ಪ್ರಧಾನಿ ಹೇಳಿದರು.

ಈ ಹಿಂದೆ ಬೃಹತ್ ಯೋಜನೆಗಳು ಸಾಕಷ್ಟು ಕಾಲ ವಿಳಂಬವಾಗುತ್ತಿದ್ದರಿಂದ ಜನ ಬೇಸತ್ತಿದ್ದರು. ಯಾವಾಗ ಬೃಹತ್ ಯೋಜನೆಗಳು ಪೂರ್ಣಗೊಳ್ಳುತ್ತವೆ ಎಂದು ಅಚ್ಚರಿ ಪಡುತ್ತಿದ್ದರು. ಆದರೆ, ದೇಶ ಬದಲಾಗಲಿದೆ ಎಂಬುದು ಮೋದಿಯ ಗ್ಯಾರಂಟಿ ಎಂದವರು ತಿಳಿಸಿದರು.

2014ಕ್ಕೆ ಮುಂಚೆ ಬೃಹತ್ ಹಗರಣಗಳ ಚರ್ಚೆ ನಡೆಯುತ್ತಿತ್ತು. ಕಳೆದ ಹತ್ತು ವರ್ಷಗಳಲ್ಲಿ ಬೃಹತ್ ಯೋಜನೆಗಳು ಪೂರ್ಣಗೊಳ್ಳುತ್ತಿರುವ ಬಗ್ಗೆ ಚರ್ಚೆ ನಡೆಯುತ್ತಿದೆ. ಹತ್ತು ವರ್ಷಗಳಲ್ಲಿ ಕನಸುಗಳು ಸಾಕಾರವಾಗುತ್ತಿವೆ. ಈ ಸಮುದ್ರ ಸೇತುವೆಯು ವಿಕಸಿತ ಭಾರತದ ಪ್ರತಿಬಿಂಬವಾಗಿದೆ. ಇದು ಭಾರತದ ಮೂಲಭೂತ ಸೌಲಭ್ಯದ ಸಾಮರ್ಥ್ಯವನ್ನು ತೋರಿಸುತ್ತಿದೆ. ಭಾರತ ಅಭಿವೃದ್ಧಿ ಹೊಂದಿದ ದೇಶವಾಗುವತ್ತ ನಡೆದಿರುವುದನ್ನು ತೋರಿಸುತ್ತಿದೆ ಎಂದವರು ಹೇಳಿದರು.

ಮುಂಬರುವ ನವಿ ಮುಂಬೈ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ, ಮುಂಬೈ ಕರಾವಳಿ ರಸ್ತೆ, ಔರಂಗಾಬಾದ್ ಕೈಗಾರಿಕಾ ನಗರ, ಮುಂಬೈ - ದೆಹಲಿ ಕೈಗಾರಿಕಾ ಕಾರಿಡಾರ್ ಹಾಗೂ ಬುಲೆಟ್ ರೈಲುಗಳು ಮಹಾರಾಷ್ಟ್ರದ ಆರ್ಥಿಕತೆಗೆ ಉತ್ತೇಜನ ನೀಡಲಿವೆ ಎಂದೂ ಅವರು ತಿಳಿಸಿದರು.

ಅಟಲ್ ಸೇತು ಯೋಜನೆಯಲ್ಲಿ ಭಾಗಿಯಾದ ಜಪಾನ್ ಸರ್ಕಾರಕ್ಕೆ ಇದೇ ವೇಳೆ ಪ್ರಧಾನಿ ಧನ್ಯವಾದ ಸಲ್ಲಿಸಿದರು. ಜಪಾನ್ ದಿವಂಗತ ಪ್ರಧಾನಿ ಶಿಂಜೊ ಅಬೆ ಅವರನ್ನೂ ಸ್ಮರಿಸಿದರು.

## ದೇಶದ ಅತಿ ದೊಡ್ಡ ಸಮುದ್ರ ಸೇತುವೆ



ಮುಂಬೈ, ಜ. 12 – ದೇಶದ ಅತಿ ದೊಡ್ಡ ಸಮುದ್ರ ಸೇತುವೆಯಾದ ಅಟಲ್ ಸೇತು ಅನ್ನು ಪ್ರಧಾನ ಮಂತ್ರಿ ನರೇಂದ್ರ ಮೋದಿ ಉದ್ಘಾಟಿಸಿದ್ದಾರೆ. ಇದು ದಕ್ಷಿಣ ಮುಂಬೈ ಅನ್ನು ನವಿ ಮಂಬೈನ ನವಶೇವಾ ಜೊತೆ ಸಂಪರ್ಕಿಸಲಿದೆ.

17,840 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾದ ಈ ಸೇತುವೆ, ಆರು ಪಥದ್ದಾಗಿದೆ. 21.8 ಕಿ.ಮೀ. ಉದ್ದದ್ದಾಗಿದ್ದು, ಇದರಲ್ಲಿ 16.5 ಕಿ.ಮೀ. ಅನ್ನು ಸಮುದ್ರದಲ್ಲಿ ನಿರ್ಮಿಸಲಾಗಿದೆ.

ಈ ಸೇತುವೆಯು ನಿರ್ಮಾಣಗೊಳ್ಳುತ್ತಿರುವ ನವಿ ಮುಂಬೈ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸನಿಹದ ಮಾರ್ಗವಾಗಿದೆ. ಇದರಿಂದಾಗಿ ಮುಂಬೈ ಹಾಗೂ ಪುಣೆ ನಡುವಿನ ಪ್ರಯಾಣದ ಅವಧಿ ಕಡಿಮೆಯಾಗಲಿದೆ. ಇದರಿಂದ ಮುಂಬೈ ಬಂದರು ಹಾಗೂ ಜವಾಹರಲಾಲ್ ನೆಹರು ಬಂದರಿನ ಸಂಪರ್ಕವೂ ಸುಧಾರಣೆಯಾಗಲಿದೆ.

2016 ರಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಈ ಯೋಜನೆಗೆ ಶಿಲಾನ್ಯಾಸ ನೆರವೇರಿಸಿದ್ದರು.

ಇದೇ ದಿನ ಪ್ರಧಾನಿ ನರೇಂದ್ರ ಮೋದಿ ಅವರು ಪೂರ್ವ ಮುಂಬೈನಿಂದ ದಕ್ಷಿಣ ಮುಂಬೈಗೆ ಸಂಪರ್ಕಿಸುವ ಸುರಂಗ ಮಾರ್ಗಕ್ಕೆ ಶಿಲಾನ್ಯಾಸ ನೆರವೇರಿಸಿದರು. 9.2 ಕಿ.ಮೀ. ಉದ್ದದ ಈ ಸುರಂಗವನ್ನು 8,700 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾಗುವುದು.


# ಮೋದಿಯಿಂದ ಭವ್ಯ ರಾಮ ಮಂದಿರ ವಿಧಿ ಲಿಖಿತ : ಬಿಜೆಪಿ ಹಿರಿಯ ನಾಯಕ ಅದ್ವಾನಿ

ನವದೆಹಲಿ, ಜ. 12 – ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಭವ್ಯ ರಾಮ ಮಂದಿರ ನಿರ್ಮಿಸಬೇಕೆಂಬುದು ವಿಧಿ ಲಿಖಿತ ಎಂದು ಬಿಜೆಪಿ ಹಿರಿಯ ನಾಯಕ ಎಲ್.ಕೆ. ಅದ್ವಾನಿ ಹೇಳಿದ್ದಾರೆ.

'ರಾಷ್ಟ್ರ ಧರ್ಮ' ನಿಯತಕಾಲಿಕಕ್ಕಾಗಿ ಅದ್ವಾನಿ ವಿಶೇಷ ಲೇಖನ ಬರೆದಿದ್ದು, ಅದರಲ್ಲಿ ಈ ಅಭಿಪ್ರಾಯ ತಿಳಿಸಿದ್ದಾರೆ. ಮುಂದಿನ ವಾರ ಲೇಖನ ಪ್ರಕಟವಾಗಲಿದೆ.

'ರಾಮ ಮಂದಿರ ನಿರ್ಮಾಣ್, ಏಕ್ ದಿವ್ಯ ಸ್ವಪ್ನ ಕಿ ಪೂರ್ತಿ' (ರಾಮ ಮಂದಿರ ನಿರ್ಮಾಣದ ಭವ್ಯ ಕನಸು ಸಾಕಾರ) ಎಂಬ ಹೆಸರಿನಲ್ಲಿ ಲೇಖನ ಬರೆದಿರುವ ಅದ್ವಾನಿ, 33 ವರ್ಷಗಳ ಹಿಂದೆ ಮಂದಿರ ನಿರ್ಮಾಣಕ್ಕಾಗಿ ನಡೆಸಿದ ರಥಯಾತ್ರೆಯ ಕುರಿತು ವಿವರ ನೀಡಿದ್ದಾರೆ.

ಅಯೋಧ್ಯೆ ಚಳವಳಿ ತಮ್ಮ ರಾಜಕೀಯ ಜೀವನದ ನಿರ್ಣಾಯಕ ಹಾಗೂ ಪರಿವರ್ತನಾತ್ಮಕ ಘಟನೆ. ಇದರಿಂದ ಭಾರತವನ್ನು ಮರು ಕಂಡುಕೊಂಡೆ ಹಾಗೂ



ಈ ಹಾದಿಯಲ್ಲಿ ನನ್ನನ್ನು ನಾನು ಹೊಸದಾಗಿ ಅರ್ಥ ಮಾಡಿಕೊಂಡೆ ಎಂದು ಅದ್ವಾನಿ ತಿಳಿಸಿದ್ದಾರೆ. ರಥಯಾತ್ರೆ ಆರಂಭಿಸಿದಾಗ ಅದು ದೇಶಾದ್ಯಂತ ಅಭಿಯಾನದ ರೂಪ ತಳೆಯಲಿದೆ ಎಂದು ಭಾವಿಸಿರಲಿಲ್ಲ ಎಂದೂ ಅದ್ವಾನಿ ತಿಳಿಸಿದ್ದಾರಲ್ಲದೇ, ಭವ್ಯ ರಾಮ ಮಂದಿರದ ಪ್ರಾಣ ಪ್ರತಿಷ್ಠಾಪನೆಯ ಸಂದರ್ಭದಲ್ಲಿ ಮಾಜಿ ಪ್ರಧಾನ ಮಂತ್ರಿ ಅಟಲ್ ಬಿಹಾರಿ ವಾಜಪೇಯಿ ಅವರ ಅನುಪಸ್ಥಿತಿ ಕಾಡುತ್ತಿದೆ ಎಂದಿದ್ದಾರೆ.

ರಾಮ ಮಂದಿರ ರಥಯಾತ್ರೆಯ ಉದ್ದಕ್ಕೂ ನನ್ನೊಂದಿಗೆ ಹಾಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರಿದ್ದರು. ಆಗ ಅವರು ಹೆಚ್ಚು ಪ್ರಸಿದ್ಧರಾಗಿರಲಿಲ್ಲ. ಆದರೆ, ಆ ಸಂದರ್ಭದಲ್ಲಿ ರಾಮ ದೇವರು ದೇವಾಲಯ ಮರು ನಿರ್ಮಾಣಕ್ಕಾಗಿ ಭಕ್ತ ಮೋದಿಯನ್ನು ಆಯ್ಕೆ ಮಾಡಿಕೊಂಡಿದ್ದರು ಎಂದು ಅದ್ವಾನಿ ತಿಳಿಸಿದ್ದಾರೆ.

ಅಯೋಧ್ಯೆಯಲ್ಲಿ ಒಂದಲ್ಲಾ ಒಂದು ದಿನ ರಾಮ ಮಂದಿರ ನಿರ್ಮಾಣವಾಗಲಿದೆ ಎಂದು ವಿಧಿ ಲಿಖಿತವಾಗಿದೆ ಎಂದು ನನಗೆ ಆವಾಗಲೇ ಅನ್ನಿಸಿತ್ತು. ಅದಕ್ಕಾಗಿ ಸರಿಯಾದ ಸಮಯ ಬರಬೇಕಿತ್ತಷ್ಟೇ ಎಂದು ಅದ್ವಾನಿ ತಿಳಿಸಿದ್ದಾರೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ರಾಮ ಮಂದಿರದಲ್ಲಿ ಮೂರ್ತಿಯ ಪ್ರಾಣ ಪ್ರತಿಷ್ಠಾಪನೆ ಮಾಡುವಾಗ, ಅವರು ದೇಶದ ಪ್ರತಿಯೊಬ್ಬ ನಾಗರಿಕರನ್ನು ಪ್ರತಿನಿಧಿಸಲಿದ್ದಾರೆ. ಪ್ರತಿಯೊಬ್ಬ ನಾಗರಿಕನೂ ಶ್ರೀ ರಾಮನ ಗುಣಗಳನ್ನು ಅಳವಡಿಸಿಕೊಳ್ಳಲು ದೇವಾಲಯ ಸ್ಫೂರ್ತಿಯಾಗಲಿ ಎಂದೂ ಬಿಜೆಪಿ ಹಿರಿಯ ನಾಯಕ ಹೇಳಿದ್ದಾರೆ.

# ಯುವನಿಧಿಗೆ ಚಾಲನೆ

**(1ನೇ ಪುಟದಿಂದ)** ಸಮಸ್ಯೆ, ರೈತರ ಸಮಸ್ಯೆ ಹೆಚ್ಚಾಗಿ ಆಹಾರ ಪದಾರ್ಥಗಳ ಬೆಲೆ ಗಗನಕ್ಕೆ ಏರಿರುವ ಸಂದರ್ಭದಲ್ಲಿ ಸಮಾಜದ ಎಲ್ಲ ವರ್ಗಗಳ ಸಮಸ್ಯೆಗೆ ಪರಿಹಾರವಾಗಿ ನಾವು ಗ್ಯಾರಂಟಿ ಯೋಜನೆಗಳನ್ನು ರೂಪಿಸಿ ಪ್ರಣಾಳಿಕೆಯಲ್ಲಿ ಘೋಷಿಸಿದೆವು. ಚುನಾವಣಾ ಪೂರ್ವ ಜನತೆಗೆ ನೀಡಿದ್ದ ಐದು ಗ್ಯಾರಂಟಿಗಳನ್ನು ಜಾರಿ ಮಾಡಿರುವುದು ಇಡೀ ರಾಷ್ಟ್ರದಲ್ಲಿ ಮಾದರಿಯಾಗಿದೆ.

ಯಾವ ಧರ್ಮದಲ್ಲಿ ಹಸಿದವರಿಗೆ ಅನ್ನ ಕೊಡುವುದಿಲ್ಲವೋ ಅಂಥ ಧರ್ಮದಲ್ಲಿ ನನಗೆ ನಂಬಿಕೆ ಇಲ್ಲ ಎಂದು ವಿವೇಕಾನಂದರು ಘೋಷಿಸಿದ್ದರು, ಅದನ್ನು ಮೂಲವಾಗಿಟ್ಟುಕೊಂಡು ಎಲ್ಲಾ ಬಡ-ಬಗ್ಗರು ಸಮನಾಗಿ ಜೀವನ ನಡೆಸಬೇಕೆಂಬ ಹಾಗೂ ಕೊಳ್ಳುವ ಶಕ್ತಿ ಹೆಚ್ಚಿಸುವಲ್ಲಿ ನಮ್ಮ ಯೋಜನೆಗಳು ಸಹಕಾರಿಯಾಗಿವೆ ಎಂದು ಮುಖ್ಯಮಂತ್ರಿ ಹೇಳಿದರು.

ನಮ್ಮ ಯೋಜನೆಗಳಿಂದ ರಾಜ್ಯದಲ್ಲಿ ಸುಮಾರು 1.50 ಕೋಟಿ ಮಂದಿಗೆ ಮಾಸಿಕ 5,000 ದಿಂದ 5,500 ರೂ. ವರೆಗೆ ಆರ್ಥಿಕ ಶಕ್ತಿ ತುಂಬಿದ್ದೇವೆ ಎಂದು ತಿಳಿಸಿದರು.

ಸಾಮಾಜಿಕ ನ್ಯಾಯದ ಬಗ್ಗೆ ಕೇವಲ ಭಾಷಣ ಮಾಡಿದರೆ ಸಾಲದು, ಅದಕ್ಕೆ ಕಾರ್ಯಕ್ರಮಗಳನ್ನು ರೂಪಿಸಿ ಜಾರಿಗೆ ತರಬೇಕು. ನಮ್ಮ ಕಾಂಗ್ರೆಸ್ ಸರ್ಕಾರ ಮಾಡುತ್ತಿರುವುದು ಇದನ್ನೇ ಎಂದರು.

ಮೊದಲ ಗ್ಯಾರಂಟಿ ಯೋಜನೆಯಿಂದಾಗಿ ಇದುವರೆಗೆ 130 ಕೋಟಿ 28 ಲಕ್ಷ ಮಹಿಳೆಯರು, ಯುವತಿಯರು ಉಚಿತವಾಗಿ ಪ್ರಯಾಣ ಮಾಡಿದ್ದಾರೆ. 1 ಕೋಟಿ 65 ಲಕ್ಷ ಕುಟುಂಬಗಳಿಗೆ 200 ಯೂನಿಟ್‌ವರೆಗೂ ಉಚಿತ ವಿದ್ಯುತ್ ನೀಡುತ್ತಿದ್ದೇವೆ. ಈ ಕೋಟಿ ಕುಟುಂಬಗಳು ನಯಾಪೈಸೆ ವಿದ್ಯುತ್ ಬಿಲ್ ಕಟ್ಟುವ ಹಾಗಿಲ್ಲ. ಇದೇ ರೀತಿ 5 ಕೆ.ಜಿ. ಅಕ್ಕಿ, 5 ಕೆ.ಜಿ. ಅಕ್ಕಿಯ ಹಣವನ್ನು ಪ್ರತೀ ಕುಟುಂಬಗಳಿಗೆ ಕೊಡುತ್ತಿದ್ದೇವೆ. 1 ಕೋಟಿ 17 ಲಕ್ಷ ಮಹಿಳೆಯರಿಗೆ, ಯುವತಿಯರಿಗೆ ಪ್ರತೀ ತಿಂಗಳು 2000 ರೂ. ತಲುಪಿಸುತ್ತಿದ್ದೇವೆ. ಇಂಥಾ ಸಾಧನೆ ಹಿಂದೆ ಯಾವ ಕಾಲದಲ್ಲೂ ಆಗಿಲ್ಲ. ಇದನ್ನೆಲ್ಲಾ ಮಾಡಿದ್ದು ನಾವು. ನಮ್ಮದೇ ನುಡಿದಂತೆ ಮಾಡಿ ತೋರಿಸಿದ ಸರ್ಕಾರ ಎಂದು ಸಮರ್ಥಿಸಿಕೊಂಡರು.

ವಿವೇಕಾನಂದರ ಜನ್ಮ ದಿನದಂದೇ ಯುವನಿಧಿ ಯೋಜನೆಯನ್ನು ನಾವು ಜಾರಿ ಮಾಡಿದ್ದೇವೆ. ಈಗಾಗಲೇ 70 ಸಾವಿರ ಯುವಕ-ಯುವತಿಯರು ಯೋಜನೆಗೆ ನೋಂದಣಿ ಮಾಡಿಕೊಂಡಿದ್ದಾರೆ ಎಂದು ವಿವರಿಸಿದರು.

ರಾಜೀವ್ ಗಾಂಧಿ ಅವರು ದೇಶದ ಯುವಕರ ಭವಿಷ್ಯಕ್ಕಾಗಿ ಸದಾ ತುಡಿಯುತ್ತಿದ್ದರು. ಅವರ ಆಶಯಕ್ಕೆ ಪೂರಕವಾಗಿ ಯುವನಿಧಿ ಯೋಜನೆ ಮತ್ತು ನಮ್ಮ ಸರ್ಕಾರ ಕೆಲಸ ಮಾಡಲಿದೆ ಎಂದರು.

ಆದ್ದರಿಂದ ಪ್ರತಿ ಯುವಕ-ಯುವತಿಯರು ಯೋಜನೆಗೆ ನೋಂದಾಯಿಸಿಕೊಂಡು ಅನುಕೂಲ ಪಡೆದುಕೊಳ್ಳಿ ಎಂದು ಕರೆ ನೀಡಿದರು.

# ಕನ್ನಡ ನಾಮಫಲಕ ಹಾಕದಿದ್ದರೆ ಲೈಸನ್ಸ್ ರದ್ದು

**(1ನೇ ಪುಟದಿಂದ)** ಎಂದು ತಿಳಿಸಿದರು. ನಗರದಲ್ಲಿ ಪ್ರತಿ ದಿನ 170 ಟನ್ ಕಸ ಸಂಗ್ರಹವಾಗುತ್ತದೆ. ಪ್ರಸ್ತುತ ಪಾಲಿಕೆ ವ್ಯಾಪ್ತಿಯಲ್ಲಿ ಮನೆಗಳಲ್ಲಿ ಕಸ ಸಂಗ್ರಹಿಸಲು 93 ಆಟೋಗಳಿವೆ. ಒಂದು ಆಟೋದಲ್ಲಿ 700 ಮನೆಗಳಿಂದ ಕಸ ಸಂಗ್ರಹಿಸಲಾಗುತ್ತದೆ. ಕೆಲವು ಕಡೆಗಳಲ್ಲಿ ಎರಡು ದಿನಗಳಿಗೊಮ್ಮೆ ಕಸ ಸಂಗ್ರಹಿಸಲಾಗುತ್ತಿದೆ. ನಗರಕ್ಕೆ 150 ಆಟೋಗಳ ಅಗತ್ಯವಿದ್ದು, ಹಂತ ಹಂತವಾಗಿ ವಾಹನ ಖರೀದಿಗೆ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಆಯುಕ್ತೆ ರೇಣುಕಾ ತಿಳಿಸಿದರು.

**ನಿವೇಶನಗಳ ಸ್ವಚ್ಛತೆಗೆ ದರ ನಿಗದಿ :** ಪಾಲಿಕೆ ವ್ಯಾಪ್ತಿಯಲ್ಲಿ 45 ಸಾವಿರ ಖಾಲಿ ನಿವೇಶನಗಳಿದ್ದು, ನಿವೇಶನಗಳ ಸ್ವಚ್ಛತೆಯ ಹೊಣೆ ಮಾಲೀಕರದ್ದಾಗಿರುತ್ತದೆ. ಶೀಘ್ರವೇ ದರ ನಿಗದಿ ಪಡಿಸಿ, ಪಾಲಿಕೆಯಿಂದಲೇ ನಿವೇಶನ ಸ್ವಚ್ಛಗೊಳಿಸಿ ಮಾಲೀಕರಿಂದ ಹಣ ವಸೂಲಿ ಮಾಡಲು ಕ್ರಮ ಕೈಗೊಳ್ಳಲಾಗುವುದು ಎಂದು ರೇಣುಕಾ ಹೇಳಿದರು.

**ಹೆಗಡೆ ನಗರದ ಬಳಿ ಮಾರುಕಟ್ಟೆಗೆ ಚಿಂತನೆ:** ಹೆಗಡೆ ನಗರದ ಬಳಿ 120 ಅಡಿ ರಿಂಗ್ ರಸ್ತೆ ನಿರ್ಮಾಣವಾಗಲಿದ್ದು, 1 ಎಕರೆಯಷ್ಟು ಜಾಗ ಉಳಿಯಲಿದೆ. ಈ ಜಾಗವು ದೂಡಾ ಆಯುಕ್ತರ ಹೆಸರಿನಲ್ಲಿದ್ದು, ಸಚಿವರೊಂದಿಗೆ ಚರ್ಚಿಸಿ, ಮಾರುಕಟ್ಟೆ ಮಾಡುವ ಚಿಂತನೆ ಇದೆ ಎಂದು ಆಯುಕ್ತರು ಹೇಳಿದರು.

**ಪಟೇಲ್ ಬಡಾವಣೆ ಹಸ್ತಾಂತರಕ್ಕೆ ಪತ್ರ:** ಜೆ.ಹೆಚ್. ಪಟೇಲ್ ಬಡಾವಣೆಯನ್ನು ಮಹಾನಗರ ಪಾಲಿಕೆಗೆ ಹಸ್ತಾಂತರ ಮಾಡುವಂತೆ ದೂಡಾ ಆಯುಕ್ತರಿಗೆ ಈಗಾಗಲೇ ಎರಡು ಬಾರಿ ಪತ್ರ ಬರೆಯಲಾಗಿದೆ. ಹಸ್ತಾಂತರ ಮಾಡುವುದಾಗಿ ಆಯುಕ್ತರು ತಿಳಿಸಿದ್ದಾರೆ ಎಂದು ರೇಣುಕಾ ಹೇಳಿದರು. ಬಡಾವಣೆಯನ್ನು ಹಸ್ತಾಂತರ ಮಾಡದ ಕಾರಣ ಪಾಲಿಕೆಗೂ ನಷ್ಟವಾಗುತ್ತಿದೆ. ಅಲ್ಲಿನ ಜನರಿಗೂ ಹೊರೆಯಾಗುತ್ತಿದೆ ಎಂದರು.

**ಶೌಚಾಲಯಗಳ ದುರಸ್ತಿಗೆ ಕ್ರಮ:** ನಗರದಲ್ಲಿ 39 ಸಾರ್ವಜನಿಕ ಶೌಚಾಲಯಗಳಿದ್ದು ಹಾಳಾಗಿರುವ ಕಟ್ಟಡಗಳ ದುರಸ್ತಿಗೆ ಕ್ರಮವಹಿಸಲಾಗುವುದು ಎಂದು ಆಯುಕ್ತರು ತಿಳಿಸಿದರು.

ಸ್ಮಾರ್ಟ್‌ಸಿಟಿಯಿಂದ 29 ಇ-ಶೌಚಾಲಯ ನಿರ್ಮಾಣ ಮಾಡಿದ್ದು ಅವು ಕೆಲಸ ನಿರ್ವಹಿಸುತ್ತಿಲ್ಲ. ಈ ಕುರಿತು ಸ್ಮಾರ್ಟ್‌ಸಿಟಿ ವ್ಯವಸ್ಥಾಪಕ ನಿರ್ದೇಶಕರಿಗೆ ಪತ್ರ ಬರೆದು ತಿಳಿಸಲಾಗಿದೆ ಎಂದರು.

ಸ್ಮಾರ್ಟ್‌ಸಿಟಿ ಯೋಜನೆಯಡಿ ಪಾಲಿಕೆ ವ್ಯಾಪ್ತಿಯಲ್ಲಿ ನಡೆದ 63 ಕಾಮಗಾರಿಗಳಲ್ಲಿ ಕೆಲವು ನಿರ್ವಹಣಾ ಹಂತದಲ್ಲಿವೆ. ಇನ್ನು ಕೆಲವು ಪ್ರಗತಿ ಹಂತದಲ್ಲಿವೆ. ಮುಗಿದಿರುವ ಕಾಮಗಾರಿಗಳ ಜಂಟಿ ಸರ್ವೇ ನಡೆಸಿ ಪಾಲಿಕೆಗೆ ಹಸ್ತಾಂತರ ಮಾಡಿಕೊಳ್ಳಲಾಗುವುದು ಎಂದರು.

ಪತ್ರಿಕಾಗೋಷ್ಠಿಯಲ್ಲಿ ಪಾಲಿಕೆ ಮೇಯರ್ ವಿನಾಯಕ್ ಪೈಲ್ವಾನ್, ಸದಸ್ಯರಾದ ಗಡಿಗುಡಾಳ್ ಮಂಜುನಾಥ್, ಎ. ನಾಗರಾಜ್, ಅಬ್ದುಲ್ ಲತೀಫ್ ಉಪಸ್ಥಿತರಿದ್ದರು.

## ಸ್ವಚ್ಛ ಸರ್ವೇಕ್ಷಣೆ : ದಾವಣಗೆರೆ ಪಾಲಿಕೆಗೆ 6ನೇ ಸ್ಥಾನ



ದಾವಣಗೆರೆ, ಜ.12- ಕೇಂದ್ರ ಸರ್ಕಾರದ ಸ್ವಚ್ಛ ಸರ್ವೇಕ್ಷಣೆಯಲ್ಲಿ ರಾಜ್ಯ ಮಟ್ಟದಲ್ಲಿ ದಾವಣಗೆರೆ ಮಹಾನಗರ ಪಾಲಿಕೆ 6ನೇ ಸ್ಥಾನ ಗಳಿಸಿದೆ ಎಂದು ಪಾಲಿಕೆ ಆಯುಕ್ತೆ ರೇಣುಕಾ ತಿಳಿಸಿದರು.

ಒಂದು ಲಕ್ಷ ಮೇಲ್ಪಟ್ಟ ಜನಸಂಖ್ಯೆ ಇರುವ ನಗರಗಳ ವಿಭಾಗದಲ್ಲಿ ಪಾಲಿಕೆಗೆ 6ನೇ ಸ್ಥಾನ ದೊರೆತಿದ್ದು, ರಾಷ್ಟ್ರಮಟ್ಟದಲ್ಲಿ 169ನೇ ಸ್ಥಾನ ಪಡೆದಿದೆ. ಇದೇ ಪ್ರಥಮ ಬಾರಿಗೆ ಸ್ಟಾರ್ ರೇಟಿಂಗ್ ಪಡೆದಿರುವುದು ಸಂತಸದ ವಿಷಯ ಎಂದರು.

ಈ ಯಶಸ್ಸಿಗೆ ಮಾರ್ಗದರ್ಶನ ನೀಡಿದ ಜಿಲ್ಲಾ ಉಸ್ತುವಾರಿ ಸಚಿವರು, ಶಾಸಕರು, ಪಾಲಿಕೆಯ ಸರ್ವ ಸದಸ್ಯರು ಹಾಗೂ ನಾಗರಿಕರಿಗೆ ಕೃತಜ್ಞತೆ ಸಲ್ಲಿಸುವುದಾಗಿ ಆಯುಕ್ತರು ಹೇಳಿದರು.

# ರಾಜ್ಯದ ಬಂಧೀಖಾನೆಯಲ್ಲಿ ತೀವ್ರವಾದ ಹರಡುತ್ತಿದ್ದವರ ವಿರುದ್ಧ ಆರೋಪ ಪಟ್ಟಿ

ನವದೆಹಲಿ, ಜ. 12 – ಬಂಧೀಖಾನೆಯಲ್ಲಿ ತೀವ್ರವಾದ ಹರಡುತ್ತಿದ್ದ ಹಾಗೂ ಆತ್ಮಹತ್ಯಾ ದಾಳಿ ನಡೆಸುವ ಸಂಚು ರೂಪಿಸಿದ್ದ ಲಷ್ಕರ್ ಎ ತೊಯ್ಬಾ ಉಗ್ರವಾದಿ ಸಂಘಟನೆಯ ಎಂಟು ಜನರ ವಿರುದ್ಧ ರಾಷ್ಟ್ರೀಯ ತನಿಖಾ ತಂಡ (ಎನ್.ಐ.ಎ.) ಕರ್ನಾಟಕದಲ್ಲಿ ಆರೋಪ ಪಟ್ಟಿ ದಾಖಲಿಸಿದೆ.

ಕೇರಳದ ಟಿ. ನಸೀರ್ ಹೆಸರೂ ಆರೋಪ ಪಟ್ಟಿಯಲ್ಲಿದೆ. ಈತ 2013ರಿಂದ ಮತ್ತೊಂದು ಪ್ರಕರಣದಲ್ಲಿ ಜೀವಾವಧಿ ಶಿಕ್ಷೆ ಎದುರಿಸುತ್ತಿದ್ದು, ಬೆಂಗಳೂರು ಕೇಂದ್ರ ಬಂಧೀಖಾನೆಯಲ್ಲಿದ್ದಾನೆ. ಜುನೈದ್ ಅಹಮದ್ ಹಾಗೂ ಸಲ್ಮಾನ್ ಖಾನ್ ವಿದೇಶಕ್ಕೆ ಪರಾರಿಯಾಗಿದ್ದಾರೆ. ಇವರ ಹೆಸರುಗಳೂ ಆರೋಪ ಪಟ್ಟಿಯಲ್ಲಿವೆ.

7 ಆರೋಪಿಗಳಿಂದ ಶಸ್ತ್ರಗಳನ್ನು ವಶಪಡಿಸಿಕೊಂಡ ನಂತರ ಕಳೆದ ವರ್ಷ ಜುಲೈ 18 ರಂದು ಬೆಂಗಳೂರಿನಲ್ಲಿ ಪ್ರಕರಣ ದಾಖಲಿಸಲಾಗಿತ್ತು. ನಂತರ ಅಕ್ಟೋಬರ್ ತಿಂಗಳಲ್ಲಿ ಪ್ರಕರಣವನ್ನು ಎನ್.ಐ.ಎ.ಗೆ ಹಸ್ತಾಂತರಿಸಲಾಗಿತ್ತು. ಹಲವು ಸ್ಫೋಟ ಪ್ರಕರಣಗಳಲ್ಲಿ ಸಿಲುಕಿದ್ದ ನಸೀರ್‌ನನ್ನು 2017ರ ವೇಳೆ ಬೆಂಗಳೂರು ಜೈಲಿನಲ್ಲಿರಿಸಲಾಗಿತ್ತು. ಆಗ ಇತರೆ ಖೈದಿಗಳನ್ನು ಸೆಳೆದು ಲಷ್ಕರ್ ಎ ತೊಯ್ಬಾ ಉಗ್ರವಾದಿ ಸಂಘಟನೆಗೆ ಸೇರಿಸಿಕೊಂಡಿದ್ದ ಎಂದು ಎನ್.ಐ.ಎ. ತಿಳಿಸಿದೆ.

# ಥೌಬಲ್‌ನಿಂದ ನ್ಯಾಯ ಯಾತ್ರೆ ಆರಂಭ

ಇಂಫಾಲ್, ಜ. 12 – ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನೇತೃತ್ವದ ಭಾರತ್ ಜೋಡೋ ನ್ಯಾಯ ಯಾತ್ರೆಯು ಈ ಹಿಂದೆ ಉದ್ದೇಶಿಸಿದ್ದಂತೆ ಮಣಿಪುರದ ರಾಜಧಾನಿ ಇಂಫಾಲದ ಬದಲು, ಥೌಬಲ್ ಜಿಲ್ಲೆಯ ಖಾಸಗಿ ಮೈದಾನದಿಂದ ಆರಂಭವಾಗಲಿದೆ.

ಇಂಫಾಲದಿಂದ ಯಾತ್ರೆ ಆರಂಭಿಸಲು ಮಣಿಪುರ ಸರ್ಕಾರ ಷರತ್ತುಗಳನ್ನು ವಿಧಿಸಿದೆ. ಹೀಗಾಗಿ ಥೌಬಲ್‌ನ ಖೊಂಗಜಾಮ್ ಪ್ರದೇಶದಿಂದ ಯಾತ್ರೆ ಆರಂಭಿಸಲಾಗುವುದು. ಯಾತ್ರೆಗೆ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಚಾಲನೆ ನೀಡಲಿದ್ದಾರೆ ಎಂದು ಮಣಿಪುರ ಕಾಂಗ್ರೆಸ್ ಅಧ್ಯಕ್ಷ ಕೀಶಮ್ ಮೇಘಚಂದ್ರ ತಿಳಿಸಿದ್ದಾರೆ.

# ಅಯೋಧ್ಯೆ ಸಮಾರಂಭ ಸಂಪೂರ್ಣ ರಾಜಕೀಯ : ಕಾಂಗ್ರೆಸ್ ಆರೋಪ

ನವದೆಹಲಿ, ಜ. 12 – ಅಯೋಧ್ಯೆಯ ರಾಮ ಮಂದಿರ ಪ್ರಾಣ ಪ್ರತಿಷ್ಠಾಪನಾ ಸಮಾರಂಭ ಸಂಪೂರ್ಣ ರಾಜಕೀಯ ಕಾರ್ಯಕ್ರಮವಾಗಿದೆ ಎಂದು ಕಾಂಗ್ರೆಸ್ ಆರೋಪಿಸಿದೆ.

ಧರ್ಮ ವೈಯಕ್ತಿಕ ವಿಷಯವಾಗಿದೆ. ಯಾರು ಬೇಕಾದರೂ ಅಯೋಧ್ಯೆ ದರ್ಶನಕ್ಕೆ ತೆರಳಬಹುದು. ಆದರೆ, ಸಮಾರಂಭವನ್ನು ರಾಜಕೀಯಗೊಳಿಸಿದ ಕಾರಣ ಜನವರಿ 22ರ ಆಹ್ವಾನ ತಿರಸ್ಕರಿಸಲಾಗಿದೆ ಎಂದು ಪಕ್ಷ ಹೇಳಿದೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿರುವ ಕಾಂಗ್ರೆಸ್ ಮಾಧ್ಯಮ ವಿಭಾಗದ ಮುಖ್ಯಸ್ಥ ಪವನ್ ಖೇರ, ಪ್ರಾಣ ಪ್ರತಿಷ್ಠಾಪನಾ ಸಮಾರಂಭದಲ್ಲಿ ಧಾರ್ಮಿಕ ಪದ್ಧತಿಗಳ ಬಗ್ಗೆ ಗಮನ ಹರಿಸಿಲ್ಲ ಎಂದು ಟೀಕಿಸಿದರು.

ಶಂಕರಾಚಾರ್ಯರು ನೀಡಿದ ಸಲಹೆಗಳಂತೆ ಧಾರ್ಮಿಕ ಪದ್ಧತಿಗಳನ್ನು ಪಾಲಿಸಿ ಸಮಾರಂಭ ನಡೆಸಲಾಗುತ್ತಿದೆಯೇ? ಅಪೂರ್ಣವಾಗಿರುವ ದೇವಾಲಯದಲ್ಲಿ ಪ್ರಾಣ ಪ್ರತಿಷ್ಠಾಪನೆ ಮಾಡಬಾರದು ಎಂದು ಎಲ್ಲಾ ನಾಲ್ಕು ಶಂಕಾಚಾರ್ಯರು ಹೇಳಿದ್ದಾರೆ ಎಂದೂ ಖೇರ ಹೇಳಿದರು.

ಬಿಜೆಪಿಯ ಐ.ಟಿ. ಸೆಲ್ ಈಗ ಶಂಕರಾಚಾರ್ಯರ ವಿರುದ್ಧ ಅಭಿಯಾನ ಆರಂಭಿಸಿದೆ. ಈ ಸಮಾರಂಭದಲ್ಲಿ ಯಾವುದೇ ಧರ್ಮ ಇಲ್ಲವೇ ಶ್ರದ್ಧೆ ಇಲ್ಲ. ಅದು ಕೇವಲ ರಾಜಕೀಯ ಘಟನೆ ಎಂದು ಖೇರಾ ಹೇಳಿದರು.

# ಮಹಾಕಾಲೇಶ್ವರ ದೇವಾಲಯದಿಂದ ಅಯೋಧ್ಯೆಗೆ ಲಡ್ಡು

ಭೂಪಾಲ್, ಜ. 12 – ಅಯೋಧ್ಯೆಯ ಪ್ರಾಣ ಪ್ರತಿಷ್ಠಾಪನಾ ಸಮಾರಂಭಕ್ಕಾಗಿ ಉಜ್ಜೈನಿಯ ಮಹಾಕಾಲೇಶ್ವರ ದೇವಾಲಯದಿಂದ ಐದು ಲಕ್ಷ ಲಡ್ಡೂಗಳನ್ನು ಕಳಿಸಲಾಗುವುದು ಎಂದು ಮಧ್ಯ ಪ್ರದೇಶದ ಮುಖ್ಯಮಂತ್ರಿ ಮೋಹನ್ ಯಾದವ್ ತಿಳಿಸಿದ್ದಾರೆ.

ಕೇಂದ್ರ ಸರ್ಕಾರ ಅವಕಾಶ ಮಾಡಿ ಕೊಡುವ ರೀತಿಯಲ್ಲಿ ರಾಜ್ಯದ ಜನರನ್ನು ರಾಮ ದೇವಾಲಯಕ್ಕೆ ನಿರ್ದಿಷ್ಟ ದಿನಗಳಂದು ಕಳಿಸಲಾಗುವುದು ಎಂದೂ ಅವರು ಹೇಳಿದ್ದಾರೆ.

# ರೈಲ್ವೆ : ವಿನಾಯಿತಿ

**(1ನೇ ಪುಟದಿಂದ)** ಉತ್ತರ ನೀಡದ ಅವರು, ಭಾರತೀಯ ರೈಲ್ವೆ ಪ್ರತಿ ಪ್ರಯಾಣಿಕನಿಗೆ ಈಗಾಗಲೇ ಶೇ. 55ರ ವಿನಾಯಿತಿ ನೀಡುತ್ತಿದೆ ಎಂದಿದ್ದಾರೆ. ಪ್ರಯಾಣಕ್ಕೆ 100 ರೂ. ವೆಚ್ಚವಾದರೆ, ರೈಲ್ವೆ ಈಗ 45 ರೂ. ಮಾತ್ರ ಶುಲ್ಕ ವಿಧಿಸುತ್ತಿದೆ. 55 ರೂಪಾಯಿಗಳ ವಿನಾಯಿತಿ ನೀಡುತ್ತಿದೆ ಎಂದವರು ಹೇಳಿದ್ದಾರೆ.

# ಸಿಜಿಕೆ ಇದ್ದಿದ್ದರೆ ರಂಗಭೂಮಿಗೆ ಹೊಸ ರೂಪ ಬರುತ್ತಿತ್ತು

## ಸಾಣೇಹಳ್ಳಿಯಲ್ಲಿ ಸಿಜಿಕೆ 18ನೇ ವರ್ಷದ ನೆನಪು ಕಾರ್ಯಕ್ರಮದಲ್ಲಿ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ

ಸಾಣೇಹಳ್ಳಿ, ಜ.12- ಸಿಜಿಕೆ ಎನ್ನುವ ಮೂರಕ್ಷರ ಚೈತನ್ಯ ತುಂಬುವಂಥದ್ದು. ಜಾತಿಯಿಂದ ನಾಯಕನಾಗಿದ್ದರೂ ಎಂದೂ ಜಾತಿಯ ಮನೋಭಾವನೆ ಬೆಳೆಸಿಕೊಂಡವರಲ್ಲ. ಮಠೀಯ ಪರಂಪರೆಯಿಂದ ದೂರವಿದ್ದು, ಮಠ, ಸ್ವಾಮಿಗಳೆಂದರೆ ಮಾರುದ್ದ ಇದ್ದಂಥವರು ಎಂದು ಸಾಣೇಹಳ್ಳಿಯ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಇಲ್ಲಿನ ಶ್ರೀ ಶಿವಕುಮಾರ ರಂಗಪ್ರಯೋಗ ಶಾಲೆಯಲ್ಲಿ ಜರುಗಿದ ಸಿಜಿಕೆಯ 18ನೆಯ ವರ್ಷದ ನೆನಪು ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.

ಸಾಣೇಹಳ್ಳಿಯಲ್ಲಿ ನಡೆದ ಒಂದು ಶಿಬಿರಕ್ಕೆ ಕೆ. ಮರುಳಸಿದ್ದಪ್ಪನವರ ಜೊತೆ ಸಿಜಿಕೆಯವರು ಬಂದಿದ್ದರು. ಆಗ ಇಷ್ಟೊಂದು ರಂಗ ಚಟುವಟಿಕೆಗಳು ಸಾಣೇಹಳ್ಳಿಯಲ್ಲಿ ನಡೆಯುತ್ತಿರಲಿಲ್ಲ. ಇಲ್ಲಿ ನಿರಂತರವಾಗಿ ರಂಗಚಟುವಟಿಕೆಗಳು ನಡೆಯಬೇಕು ಎಂದು ಸಿಜಿಕೆ ನಮಗೆ ಹೇಳಿದರು. 'ಶಿವಸಂಚಾರ' ಹೆಸರಿಡಬಹುದು



ಎಂದು ಸೂಚಿಸಿದವರೂ ಅವರೇ. ಆಗ ಶಿವಸಂಚಾರದಲ್ಲಿದ್ದ ಕಲಾವಿದರು ತರಬೇತಿ ಪಡೆದವರಲ್ಲ. ಆದರೆ ಪ್ರತಿಭಾವಂತರಾಗಿದ್ದರು. ಸಿಜಿಕೆಯಲ್ಲಿದ್ದ ಒಂದು ವಿಶಿಷ್ಟ ಗುಣ ಪ್ರತಿದಿನ ಒಬ್ಬೊಬ್ಬ ಹೊಸ ವಿದ್ವಾಂಸರನ್ನು, ಕಲಾವಿದರನ್ನು, ನಿರ್ದೇಶಕರನ್ನು, ಸಾಹಿತಿಗಳನ್ನು, ಚಿಂತಕರನ್ನು ನಮಗೆ ಪರಿಚಯಿಸುವ ಚಾಕಚಕ್ಯತೆ ಅವರಲ್ಲಿತ್ತು. ಕಟ್ಟುವ ಮತ್ತು ಸಂಘಟಿಸುವ, ಪ್ರೀತಿಸುವ ಗುಣ ಅವರಲ್ಲಿತ್ತು. ಎಂದೂ ಹಣಕ್ಕಾಗಿ ಆಸೆಪಟ್ಟವರಲ್ಲ. ಸಂಗ್ರಹಪ್ರವೃತ್ತಿ ಅವರಲ್ಲಿರದೇ ದಾಸೋಹ ಪ್ರಜ್ಞೆ ಇತ್ತು.

ವಿಶ್ವಬಂಧು ಮರುಳಸಿದ್ಧರ ಸಾಕ್ಷ್ಯಚಿತ್ರ ಸಂಗ್ರಹ ಕಾರ್ಯದಲ್ಲಿದ್ದಾಗಲೇ ಸಿರಿಗೆರೆಯಲ್ಲಿ 11-01-2006ರಲ್ಲಿ ಮರಣ ಹೊಂದಿದರು. ಅವರ ಪಾರ್ಥಿವ ಶರೀರವನ್ನು ಸಿರಿಗೆರೆಯಿಂದ ಚಿತ್ರದುರ್ಗ, ತುಮಕೂರು ಮಾರ್ಗವಾಗಿ ಬೆಂಗಳೂರಿನ ಅವರ ಮನೆಗೆ ತೆಗೆದುಕೊಂಡು ಹೋಗಲಾಯಿತು. ರವೀಂದ್ರ ಕಲಾಕ್ಷೇತ್ರದಲ್ಲಿ ಸಂತಾಪ ಸೂಚಕ ಸಭೆ ನಡೆಯಿತು. ಅದರಲ್ಲಿ ನಾಡಿನ ಗಣ್ಯರು, ಚಿಂತಕರು, ಸಾಹಿತಿಗಳು, ಬಹುಸಂಖ್ಯೆಯಲ್ಲಿ ತಮ್ಮ ನುಡಿ ನಮನ ಸಲ್ಲಿಸಿದರು.

ನಂತರ ಬೆಂಗಳೂರಿನಿಂದ ಅವರ ಹುಟ್ಟೂರು ಚಳ್ಳಕೆರೆಯ ಪರಶುರಾಂಪುರಕ್ಕೆ ತಂದು ಅಲ್ಲಿಂದ ಸಾಣೇಹಳ್ಳಿಯ ಗ್ರೀಕ್ ಬಯಲು ರಂಗಮಂದಿರದ ಪಕ್ಕದಲ್ಲಿ ಸಂಸ್ಕಾರ ಮಾಡಲಾಯಿತು. ಅದುವರೆಗೂ ಬರದೇ ಇದ್ದಂಥ ಅನೇಕ ವಿದ್ವಾಂಸರು, ಸಾಹಿತಿಗಳು, ಚಿಂತಕರು ಸಾಣೇಹಳ್ಳಿಗೆ ಬಂದದ್ದು ವಿಶೇಷ. ಜಿಸಿಕೆ ಇವತ್ತಿನವರೆಗೂ ಇದ್ದಿದ್ದರೇ ರಂಗಭೂಮಿಗೆ ಹೊಸ ರೂಪ ಬರುತ್ತಿತ್ತು. ಎಂದೂ ಒಂದು ಕಡೆ ಕೂರದೇ ಜಂಗಮ ರೂಪಿಗಳಾಗಿದ್ದರು. ನಾಟಕಗಳನ್ನು ರಚಿಸಿ, ನಿರ್ದೇಶನ ಮಾಡಿದರು. ಪ್ರತಿಯೊಬ್ಬರಲ್ಲೂ ಪ್ರತಿಭೆಯನ್ನು ಗುರುತಿಸುತ್ತಿದ್ದರು ಎಂದು ಸ್ವಾಮೀಜಿ ವಿವರಿಸಿದರು.

ಐ. ಜಿ. ಚಂದ್ರಶೇಖರಯ್ಯ, ರಾಜು ಲಕ್ಕಮುತ್ತೇನಹಳ್ಳಿ ಮಾತನಾಡಿದರು. ರಂಗ ಶಾಲೆಯ ಪ್ರಾಂಶುಪಾಲ ನಟರಾಜ್ ಹೊನ್ನಾವಳ್ಳಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ನೆನಪು ಕಾರ್ಯಕ್ರಮಕ್ಕೆ ಮೊದಲು ಸಿಜಿಕೆ ಅವರ ಸಮಾಧಿಗೆ ಪುಷ್ಪ ನಮನ ಸಲ್ಲಿಸಲಾಯಿತು. ಚಂದ್ರಶೇಖರಾಚಾರ್ ರಂಗ ಗೀತೆಗಳನ್ನು ಹಾಡಿದರು.

# ಚುನಾವಣಾ ಆಯುಕ್ತರ ಆಯ್ಕೆ ಕಾಯ್ದೆ ತಡೆಗೆ ಸುಪ್ರೀಂ ನಕಾರ

ನವದೆಹಲಿ, ಜ. 12 – ಮುಖ್ಯ ಚುನಾವಣಾ ಆಯುಕ್ತರು ಹಾಗೂ ಚುನಾವಣಾ ಆಯುಕ್ತರ ಆಯ್ಕೆಗೆ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ರಹಿತವಾದ ಸಮಿತಿ ರಚಿಸಲು ಕೇಂದ್ರ ಸರ್ಕಾರ ರೂಪಿಸಿರುವ ಕಾಯ್ದೆಗೆ ತಡೆಯಾಜ್ಞೆ ಹೊರಡಿಸಲು ಸುಪ್ರೀಂ ಕೋರ್ಟ್ ನಿರಾಕರಿಸಿದೆ.

ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಹಾಗೂ ದೀಪಂಕರ್ ದತ್ತ ಅವರನ್ನು ಒಳಗೊಂಡ ಪೀಠದ ಎದುರು ಅರ್ಜಿ ದಾಖಲಿಸಲಾಗಿತ್ತು. ಆದರೆ, ನೂತನ ಕಾಯ್ದೆಯನ್ನು ಪ್ರಶ್ನಿಸುವ ಅರ್ಜಿಯ ಹಿನ್ನೆಲೆಯಲ್ಲಿ, ಕೇಂದ್ರ ಸರ್ಕಾರಕ್ಕೆ ನೋಟಿಸ್ ಕಳಿಸುವುದಾಗಿ ನ್ಯಾಯಾಲಯ ಹೇಳಿದೆ.


**ಮಹಾನಗರ ಪಾಲಿಕೆ ಕಾರ್ಯಾಲಯ**
**ದಾವಣಗೆರೆ-577 002.**

ನಂ.ದಾ.ಮ.ನ.ಪಾ/ವಕ-2/ವಾ-33/ಸಿಆರ್-113/2023-24
ದಿನಾಂಕ : 23.12.2023

**ಸಾರ್ವಜನಿಕ ಪ್ರಕಟಣೆ**

ದಿನಾಂಕ :18.10.2023ರಂದು ಶ್ರೀ ರೊಕ್ಕನ ಮನೆ ಪರಮೇಶ್ವರಪ್ಪ ಬಿನ್ ವೆಂಕಟರಮಣ ಶೇರಗಾರರವರ ಕ್ರಯಪತ್ರ ಸಂ. : 1048/84-85 ದಿನಾಂಕ : 07.05.1984ರ ಆಧಾರದ ಮೇಲೆ ದಾವಣಗೆರೆ ಮಹಾನಗರಪಾಲಿಕೆ ವ್ಯಾಪ್ತಿಯ ವಾರ್ಡ್ ನಂ. 34 ಶಿವಕುಮಾರಸ್ವಾಮಿ ಬಡಾವಣೆಯಲ್ಲಿ ಬರುವ # 552/12/90 ಅಳತೆ 49+30/2x36+30/2ರ ಅಡಿ ಸ್ವತ್ತಿನ ಇ-ಆಸ್ತಿಯನ್ನು ಕೊಡಲು ಈ ಕಛೇರಿಗೆ ಮನವಿ ಸಲ್ಲಿಸಿರುತ್ತಾರೆ. ಕಛೇರಿ ದಾಖಲೆಯನ್ನು ಪರಿಶೀಲಿಸಲಾಗಿ ಸದರಿ ಸ್ವತ್ತಿನ ಮಾಲೀಕರ ಹೆಸರು ಕಛೇರಿ ದಾಖಲೆಯ ಎಂ.ಎ.ಆರ್.-19ರಲ್ಲಿ ಪ್ರೇಮಾ ಕೋಂ ಲಚ್ಚೇಗೌಡ ಎಂದು ದಾಖಲಾಗಿರುವುದು ಕಂಡುಬಂದಿರುತ್ತದೆ.

ಅರ್ಜಿದಾರರು ಹಾಜರುಪಡಿಸಿರುವ ಕ್ರಯಪತ್ರದಲ್ಲಿ # 552/12/90ರ ಸ್ವತ್ತನ್ನು ಶ್ರೀ ರೊಕ್ಕನ್ ಮನೆ ಪರಮೇಶ್ವರಪ್ಪ ಬಿನ್ ವೆಂಕಟರಮಣ ಶೇರಗಾರರವರ ಮೂಲ ಬಡಾವಣೆಯ ಮಾಲೀಕರಾದ ಶ್ರೀ ಸದಾನಂದ ಬಿನ್ ಜಯದೇವಪ್ಪನವರುಗಳಿಂದ ಕ್ರಮಕ್ಕೆ ಪಡೆದಿರುವುದು ಕಂಡು ಬಂದಿರುತ್ತದೆ. 2000-01ನೇ ಸಾಲಿನ ಎಂ.ಎ.ಆರ್-19 ಪುಸ್ತಕದಲ್ಲಿ ಖಾತೆ ಇಲ್ಲದ ಪ್ರಯುಕ್ತ ಕಛೇರಿಗೆ ಒಪ್ಪಿಸಲಾದ ಖಾತೆಯಲ್ಲಿ ಶ್ರೀಮತಿ ಪ್ರೇಮಾ ಕೋಂ. ಲಚ್ಚೇಗೌಡ ಇವರ ಹೆಸರನ್ನು ನಮೂದಿಸಿರುವುದು ಕಂಡುಬಂದಿರುತ್ತದೆ. ಸ್ಥಳದಲ್ಲಿ ಖಾಲಿ ನಿವೇಶನವಿರುವುದು ಕಂಡು ಬಂದಿರುವುದರಿಂದ ಈ ಸಾರ್ವಜನಿಕ ಪ್ರಕಟಣೆ ಮೂಲಕ ಶ್ರೀಮತಿ ಪ್ರೇಮಾ ಕೋಂ ಲಚ್ಚೇಗೌಡ ಆಗಲೀ ಅಥವಾ # 552/12/90ರ ಸ್ವತ್ತಿಗೆ ಸಂಬಂಧಪಟ್ಟ ವಾರಸುದಾರರಿಗೆ ತಿಳಿಸುವುದೇನೆಂದರೆ, ಸದರಿ ಸ್ವತ್ತಿಗೆ ಸಂಬಂಧಿಸಿದಂತೆ ಮಾಲೀಕತ್ವದ ಮೂಲ ದಾಖಲೆಗಳನ್ನು ಈ ಸಾರ್ವಜನಿಕ ಪ್ರಕಟಣೆ ಪ್ರಚುರಪಡಿಸಿದ 15 ದಿನಗಳೊಳಗಾಗಿ ಈ ಕಛೇರಿ ಕಂದಾಯ ಶಾಖೆಗೆ ಹಾಜರುಪಡಿಸಲು ತಿಳಿಸಿದೆ. ತಪ್ಪಿದಲ್ಲಿ ಬೇರೆ ಮಾಲೀಕರು ಯಾರು ಇಲ್ಲ ಎಂದು ಭವಿಸಿ ಡೋರ್. ನಂ. 552/12/92ರ ಆಸ್ತಿತೆರಿಗೆ ದಾಖಲಾತಿ ಹೊಣೆಯನ್ನು ಶ್ರೀ ರೊಕ್ಕನ ಮನೆ ಪರಮೇಶ್ವರಪ್ಪ ಬಿನ್ ವೆಂಕಟಣ ಶೇರಗಾರರವರ ಹೆಸರಿಗೆ ನಮೂದಿಸಿಕೊಳ್ಳಲಾಗುವುದು ಎಂದು ತಿಳಿಯಪಡಿಸಿದೆ.

ಸಹಿ/- ಉಪ ಆಯುಕ್ತರು (ಕಂದಾಯ)
ಮಹಾನಗರ ಪಾಲಿಕೆ, ದಾವಣಗೆರೆ.

# ಸಮಗ್ರ ಕೃಷಿ ಪದ್ಧತಿ ಅಳವಡಿಸಿ, ಹೆಚ್ಚಿನ ಆದಾಯ ಗಳಿಸಿ

## ಕಾಡಜ್ಜಿಯಲ್ಲಿನ ರೈತರ ತರಬೇತಿ ಕಾರ್ಯಕ್ರಮದಲ್ಲಿ ಮಂಜುನಾಥ ಗೊಂದಿ



ದಾವಣಗೆರೆ, ಜ.12- ಜಿಲ್ಲಾ ಕೃಷಿ ತರಬೇತಿ ಕೇಂದ್ರ ಕಾಡಜ್ಜಿ ವತಿಯಿಂದ ಜಿಲ್ಲೆಯ ವಿವಿಧ ತಾಲ್ಲೂಕುಗಳ ರೈತರಿಗೆ ಸಮಗ್ರ ಕೃಷಿ ಪದ್ಧತಿ ಕುರಿತು ತರಬೇತಿ ನಡೆಯಿತು.

ತರಬೇತಿ ಶಿಬಿರವನ್ನು ಜಿಲ್ಲಾ ತರಬೇತಿ ಕೇಂದ್ರದ ಮುಖ್ಯಸ್ಥ ಮಂಜುನಾಥ ಗೊಂದಿ ಉದ್ಘಾಟಿಸಿ ಪ್ರಾಸ್ತಾವಿಕವಾಗಿ ಮಾತನಾಡುತ್ತಾ, ರೈತರು ಸಮಗ್ರ ಕೃಷಿ ಪದ್ಧತಿಯನ್ನು ಅಳವಡಿಸಿಕೊಂಡು, ಹೆಚ್ಚಿನ ಆದಾಯ ಗಳಿಸುವ ನಿಟ್ಟಿನಲ್ಲಿ ಗಮನ ಹರಿಸಲು ಕರೆ ನೀಡಿದರು.

ಸಂಪನ್ಮೂಲ ವ್ಯಕ್ತಿಗಳಾಗಿ ಸಾವಯುವ ಕೃಷಿಕರು ಹಾಗೂ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರೂ ಆದ ಎಚ್. ವಿ. ಸಜ್ಜನ್ ಹುಲಿಕೆರೆ, ಪ್ರಗತಿಪರ ರೈತರಾದ ಶರಣಪ್ಪ ಹುಲಿಕೆರೆ ಇವರು ಸಮಗ್ರ ಕೃಷಿ ಪದ್ಧತಿಯಲ್ಲಿ ಖುಷ್ಕಿ ತೋಟಗಾರಿಕಾ ಬೆಳೆಗಳು ಹಾಗೂ ಹೈನುಗಾರಿಕೆ ಬಗ್ಗೆ ಮಾಹಿತಿ ಹಂಚಿಕೊಂಡರು.

ಕತ್ತಲಗೆರೆ ಕೃಷಿ ಮತ್ತು ತೋಟಗಾರಿಕೆ ಸಂಶೋಧನಾ ಕೇಂದ್ರದ ವಿಜ್ಞಾನಿ ಶರಣಪ್ಪ ಕುರಿ, ನಿವೃತ್ತ ಸಹಾಯಕ ಕೃಷಿ ನಿರ್ದೇಶಕ ರಾಜಶೇಖರಪ್ಪ, ಕಾರ್ಡಿಯ ಸಂಸ್ಥೆ ಮುಖ್ಯಸ್ಥ ಸುದರ್ಶನ್ ಸಮಗ್ರ ಕೃಷಿ ಪದ್ಧತಿ ಮಹತ್ವಗಳ ಬಗ್ಗೆ ಮಾಹಿತಿ ಹಂಚಿಕೊಂಡರು.

ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಸಿಬ್ಬಂದಿಗಳಾದ ಶ್ರೀಮತಿ ಲತಾ ಪಾಟೀಲ್, ಕೇಶವಮೂರ್ತಿ ನಾಯ್ಕ ಹಾಗೂ ಕೇಶವ ಅವರುಗಳು ಉಪಸ್ಥಿತರಿದ್ದರು.

# ರಾಜಕೀಯ ಈಗ ಸೇವೆಯಾಗಿ ಉಳಿದಿಲ್ಲ

## ಡಾ. ಕೇಲಗಾರ ಸನ್ಮಾನ ಸಮಾರಂಭದಲ್ಲಿ ಶ್ರೀ ಪ್ರಕಾಶಾನಂದ ಮಹಾರಾಜರ ಬೇಸರ



ರಾಣೇಬೆನ್ನೂರು, ಜ.12- ನನ್ನಿಂದ ಸಮಾಜ ಬೆಳೆಯಿತು ಎನ್ನುವ ಅಹಂಭಾವ ವ್ಯಕ್ತಿಯಲ್ಲಿ ಬರಬಾರದು. ಅದು ರಾಜಕಾರಣಿಗಳಿಗಂತೂ ಬರಲೇಬಾರದು. ವ್ಯಕ್ತಿತ್ವ ಇದ್ದವರು ಸಮಾಜಮುಖಿಯಾಗಿ ಬೆಳೆಯುತ್ತಾರೆ. ಅಂತಹವರಿಗೆ ಅಧಿಕಾರ ಸಿಕ್ಕರೆ ಸಮಾಜಗಳ ಅಭಿವೃದ್ಧಿ ಸಾಧ್ಯವಾಗಲಿದೆ ಎಂದು ವಿವೇಕಾನಂದಾಶ್ರಮದ ಶ್ರೀ ಪ್ರಕಾಶಾನಂದ ಮಹಾರಾಜರು ಹೇಳಿದರು.

ಇಲ್ಲಿನ ಗಾಯತ್ರಿ ಸಹಕಾರಿ ಸೊಸೈಟಿ ವತಿಯಿಂದ ಕಾಕಿ ಜನಸೇವಾ ಸಂಸ್ಥೆಯ ಸಭಾಂಗಣದಲ್ಲಿ ನಡೆದ ಬಿಜೆಪಿ ಉಪಾಧ್ಯಕ್ಷ ಡಾ.ಬಸವರಾಜ ಕೇಲಗಾರ ಅಭಿನಂದನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಹಿಂದೆ ರಾಜಕೀಯ ಸೇವೆಯಾಗಿತ್ತು. ಏನನ್ನೂ ಬಯಸದೆ, ಏನನ್ನೂ ಪಡೆಯದೆ, ನಿಷ್ಕಳಂಕ, ನಿಸ್ವಾರ್ಥತೆಯಿಂದ ಕೂಡಿತ್ತು. ಆದರೆ ಇಂದು ರಾಜಕೀಯ ಸೇವೆಗೆ ಬೇರೆಯದೇ ಅರ್ಥವಿದೆ. ಅಂದಿಗೂ ಇಂದಿಗೂ ಅಜಗಜಾಂತರ ವ್ಯತ್ಯಾಸವಿದೆ. ಸೇವೆ ಎನ್ನುವ ಪದಕ್ಕೆ ವಿಶಾಲವಾದ ಅರ್ಥವಿದೆ. ಇಂದು ಸೇವೆ ಅರ್ಥ ಕಳೆದುಕೊಂಡಿದೆ ಎಂದು ಶ್ರೀ ಪ್ರಕಾಶಾನಂದ ಮಹಾರಾಜರು ಬೇಸರ ವ್ಯಕ್ತಪಡಿಸಿದರು.

ರೋಟರಿ ಸಂಸ್ಥೆಯಲ್ಲಿ ಸೇವೆ ಸಲ್ಲಿಸಿದ ಅನುಭವ ಹಾಗೂ ಹಿರಿಯರ ಮಾರ್ಗದರ್ಶನದಲ್ಲಿ ಜನರ ಸೇವೆ ಮಾಡುವ ಹಂಬಲದಿಂದ ರಾಜಕೀಯಕ್ಕೆ ಬಂದಿದ್ದೇನೆ. ನಾನು ಹಣ ಮಾಡಲು ರಾಜಕೀಯಕ್ಕೆ ಬಂದಿಲ್ಲ ಎಂದು ಸನ್ಮಾನ ಸ್ವೀಕರಿಸಿ ಮಾತನಾಡಿದ ಡಾ. ಬಸವರಾಜ ಕೇಲಗಾರ ಹೇಳಿದರು.

ವೇದಿಕೆಯಲ್ಲಿ ನಗರಸಭೆ ಸದಸ್ಯ ಹನುಮಂತಪ್ಪ ಹೆದ್ದೇರಿ, ಮಾಜಿ ನಗರಾಧ್ಯಕ್ಷ ಬಸವರಾಜ ಕೇಲಗಾರ, ಡಾ.ಚಂದ್ರಶೇಖರ ಕೇಲಗಾರ, ಸಂಕಪ್ಪ ಮಾರನಾಳ, ಅಶೋಕ ದುರ್ಗದ ಸೀಮಿ, ಲಕ್ಷ್ಮಿಕಾಂತ ಹುಲಗೂರ, ಗಣೇಶ ಸಿರಗೂರ ಮತ್ತಿತರರಿದ್ದರು.

## ಏಳೂವರೆ ವರ್ಷಗಳ ಹಿಂದೆ ಕಣ್ಮರೆಯಾಗಿದ್ದ ವಾಯುಪಡೆ ವಿಮಾನದ ಅವಶೇಷ ಪತ್ತೆ

ನವದೆಹಲಿ, ಜ. 12 – ಏಳೂವರೆ ವರ್ಷಗಳ ಹಿಂದೆ 29 ಸಿಬ್ಬಂದಿಯೊಂದಿಗೆ ನಾಪತ್ತೆಯಾಗಿದ್ದ ವಾಯುಪಡೆಯ ಸಾರಿಗೆ ವಿಮಾನದ ಅವಶೇಷ ಈಗ ಬಂಗಾಳ ಕೊಲ್ಲಿಯಲ್ಲಿ 3,400 ಮೀಟರ್ ಆಳದಲ್ಲಿ ಪತ್ತೆಯಾಗಿದೆ.

ಸ್ವಯಂಚಾಲಿತ ಜಲಾಂತರ್‌ಗಾಮಿ ವಾಹನಗಳು ತೆಗೆದ ಚಿತ್ರದಿಂದ ಈ ಮಾಹಿತಿ ದೊರೆತಿದೆ ಎಂದು ರಕ್ಷಣಾ ಇಲಾಖೆ ತಿಳಿಸಿದೆ.

ಪತನಗೊಂಡಿದ್ದ ಎ.ಎನ್. -32 ವಿಮಾನದ ಅವಶೇಷಗಳು ಇವಾಗಿವೆ. ಈ ಭಾಗದಲ್ಲಿ ಬೇರೆ ಯಾವುದೇ ವಿಮಾನ ಕಣ್ಮರೆಯಾಗಿರಲಿಲ್ಲ. ಚೆನ್ನೈ ಕರಾವಳಿಯಿಂದ 310 ಕಿ.ಮೀ. ದೂರದಲ್ಲಿ ಅವಶೇಷಗಳು ಪತ್ತೆಯಾಗಿವೆ ಎಂದು ಸಚಿವಾಲಯ ಹೇಳಿದೆ.

ಚೆನ್ನೈನಿಂದ ಪೋರ್ಟ್ ಬ್ಲೇರ್‌ಗೆ ತೆರಳುವ ಹಾದಿಯಲ್ಲಿದ್ದಾಗ ಎಎನ್-32 ವಿಮಾನ ಪತನಗೊಂಡಿತ್ತು. ದೊಡ್ಡ ಪ್ರಮಾಣದಲ್ಲಿ ಶೋಧ ಹಾಗೂ ರಕ್ಷಣಾ ಕಾರ್ಯಾಚರಣೆ ನಡೆಸಲಾಗಿತ್ತು. ಆದರೆ, ನಾಪತ್ತೆಯಾದ ಸಿಬ್ಬಂದಿ ಇಲ್ಲವೇ ವಿಮಾನದ ಅವಶೇಷಗಳನ್ನು ಪತ್ತೆ ಮಾಡಲು ಸಾಧ್ಯವಾಗಿರಲಿಲ್ಲ.



## ಭಾನುವಳ್ಳಿ : 4ನೇ ದಿನಕ್ಕೆ ಕಾಲಿಟ್ಟ ಧರಣಿ

ಮಲೇಬೆನ್ನೂರು, ಜ.12- ಭಾನುವಳ್ಳಿ ಗ್ರಾಮದ ವಾಲ್ಮೀಕಿ ವೃತ್ತದ ಪಕ್ಕದಲ್ಲೇ ರಾತ್ರೋರಾತ್ರಿ ಪ್ರತಿಷ್ಠಾಪಿಸಿರುವ ಪ್ರತಿಮೆಯನ್ನು ತೆರವು ಮಾಡಿಸುವಂತೆ ಆಗ್ರಹಿಸಿ, ವಾಲ್ಮೀಕಿ ವೃತ್ತದಲ್ಲಿ ನಡೆಸುತ್ತಿರುವ ಧರಣಿ ಸತ್ಯಾಗ್ರಹವು ಶುಕ್ರವಾರ 4ನೇ ದಿನಕ್ಕೆ ಕಾಲಿಟ್ಟಿದೆ.

ಹಗಲು-ರಾತ್ರಿ ಧರಣಿ ನಡೆಸುತ್ತಿರುವ ವಾಲ್ಮೀಕಿ ನಾಯಕ ಸಮಾಜದವರು ಪ್ರತಿಮೆಯನ್ನು ತೆರವು ಗೊಳಿಸುವ ತನಕ ಧರಣಿ ಸತ್ಯಾಗ್ರಹ ನಿಲ್ಲಿಸುವುದಿಲ್ಲ ಎಂದಿದ್ದಾರೆ. ಧರಣಿ ಸ್ಥಳದಲ್ಲಿಯೇ ಊಟ, ಉಪಹಾರ ಮಾಡಿ, ರಾತ್ರಿ ಅಲ್ಲಿಯೇ ಮಲಗುತ್ತಿದ್ದಾರೆ. ಪೊಲೀಸರು ಭದ್ರತೆ ಒದಗಿಸಿದ್ದಾರೆ.

## ರೋಲ್‌ಬಾಲ್ ಚಾಂಪಿಯನ್‌ಶಿಪ್ ಕರ್ನಾಟಕ ತಂಡಕ್ಕೆ ದ್ವಿತೀಯ ಸ್ಥಾನ

ದಾವಣಗೆರೆ, ಜ.12- ಕರ್ನಾಟಕ ರೋಲ್ ಬಾಲ್ ಅಸೋಸಿಯೇಷನ್ ಆಯೋಜಿಸಿದ್ದ ಬೆಳಗಾಂನ ಶಿವಗಂಗಾ ರೋಲ್‌ಬಾಲ್ ಸಂಸ್ಥೆ ಆವರಣದಲ್ಲಿ ಇತ್ತೀಚಿಗೆ ನಡೆದ ರಾಷ್ಟ್ರೀಯ ಮಟ್ಟದ ರೋಲ್‌ಬಾಲ್ ಚಾಂಪಿಯನ್ ಶಿಪ್ ನಲ್ಲಿ ಕರ್ನಾಟಕ ತಂಡಕ್ಕೆ ದ್ವಿತೀಯ ಸ್ಥಾನ ಲಭಿಸಿದೆ.

ಪಂದ್ಯಾವಳಿಯಲ್ಲಿ 26 ತಂಡಗಳು ಭಾಗವಹಿಸಿದ್ದವು. ಪಂದ್ಯಾವಳಿಯಲ್ಲಿ ವಿಜಯ್ ಬಾರ್ಲ, ನಿಖಿಲ್, ಚಿಂದಕ್ ಎನ್.ಎಸ್., ಮಣಿಕಂಠ ಪಾಲಿಶೆಟ್ಟಿ, ರಿಷಬ್ ಹೆಚ್.ಸಿ., ಪ್ರಣಜ್ ಪಿ., ಭರತ್ ಸಾಕಿಲ್, ಯೋಗೀಶ್ ರಿಜಿ, ಅಖಿಲ್, ಸಾಗರ್ ಪ್ರತೀಕ್ ಇವರು ಭಾಗವಹಿಸಿ ದ್ವಿತೀಯ ಸ್ಥಾನದೊಂದಿಗೆ ವಿಜೇತರಾಗಿದ್ದಾರೆ.

ನಗರದ ಪೃಥ್ವಿಕಾಂತ್ ಕೊಟಗಿ ಕರ್ನಾಟಕ ತಂಡದ ಟೀಮ್ ಮ್ಯಾನೇಜರ್ ಜವಾಬ್ದಾರಿ ನಿರ್ವಹಿಸಿದರು.

ವಿಜೇತರ ತಂಡವನ್ನು ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಸೌಭಾಗ್ಯ ನಾಗರಾಜ್, ಗಡಿಗುಡಾಳ್ ಮಂಜುನಾಥ್, ಹೆಚ್. ನಾಗಪ್ಪ, ಎನ್.ಕೆ. ಆಕಾಶ್, ಎಂ.ಜೆ.ಜಯೇಶ್, ಜಿಲ್ಲಾಧ್ಯಕ್ಷರಾದ ಜಿ.ಪಿ. ಸುಮಾ, ರಾಷ್ಟ್ರೀಯ ಅಧ್ಯಕ್ಷ ತಪನ್ ಆಚಾರ್ಯ, ಕಾರ್ಯದರ್ಶಿ ಚೇತನ್ ದಾದಾ, ಡಾ. ಜೆ.ಕೆ. ನೀಲಕಾಂತ್, ಶೈಲಾ ನೀಲಕಾಂತ್, ಬಸಮ್ಮ ಆಕಾಶ್ ಅಭಿನಂದಿಸಿದ್ದಾರೆ.



## ದಾವಿವಿಯಲ್ಲಿ ಶ್ರೀ ಸಿದ್ಧರಾಮೇಶ್ವರ ಅಧ್ಯಯನ ಪೀಠ ಆರಂಭಿಸಲು ಆಗ್ರಹ

ದಾವಣಗೆರೆ,ಜ.12-ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ ಶಿವಯೋಗಿ ಸಿದ್ಧರಾಮೇಶ್ವರರ ಅಧ್ಯಯನದ ಗುರು ಪೀಠವನ್ನು ಸ್ಥಾಪಿಸಬೇಕೆಂದು ಒತ್ತಾಯಿಸಿ ಜಿಲ್ಲಾಧಿಕಾರಿಗಳಿಗೆ ಸಮಾಜದ ವತಿಯಿಂದ ಮನವಿ ಸಲ್ಲಿಸಲಾಯಿತು.

ಜೀವನ ಚರಿತ್ರೆಗೆ ಸಂಬಂಧಿಸಿದ ಅನೇಕ ಆಧಾರಗಳು ವಚನ, ಕಾವ್ಯ, ಶಾಸನ, ಐತಿಹ್ಯಗಳಲ್ಲಿ ದೊರೆಯುತ್ತವೆ. ಮಹಾರಾಷ್ಟ್ರದ ಇಂದಿನ ಸೊಲ್ಲಾಪುರ ಈತನ ಜನ್ಮ ಸ್ಥಳವಾಗಿದೆ. ತಂದೆ ಮುದ್ದುಗೌಡ, ತಾಯಿ ಸುಗ್ಗಲೆ, ಮನೆ ದೇವ ದೂಳಿಮಹಾಕಾಳ. ರೇವಣಸಿದ್ದನ ವರದಿಂದ ಹುಟ್ಟಿದ ಇವರಿಗೆ ತಂದೆ, ತಾಯಿ ಇಟ್ಟ ಹೆಸರು ದೂಳಿಮಹಾಕಾಳ. ಆನಂತರ ನಾಥ ಸಿದ್ಧ ಸಂಪ್ರದಾಯನಾಗುವಲ್ಲಿ ಸಿದ್ದರಾಮನೆಂದು ಪ್ರಸಿದ್ಧರಾದರು.

ಕೆರೆ, ಕಟ್ಟೆಗಳನ್ನು ಕಟ್ಟಿಸುವ ಕಾಯಕದಲ್ಲಿ ತೊಡಗಿ ಕರ್ಮ ಯೋಗಿ ಎನಿಸಿದ. ಅನುಭವ ಮಂಟಪದ ಗೋಷ್ಠಿಯಲ್ಲಿ ಮಹಾ ಶಿವಯೋಗಿ ಆದ. ಸಿದ್ಧರಾಮನ ವಚನ, ಸ್ವರ ವಚನ, ಬಸವ ಸ್ತೋತ್ರದ ತ್ರಿವಿಧಿ, ಅಷ್ಟಾವರಣ ಸ್ತೋತ್ರದ ತ್ರಿವಿಧಿ, ಸಂಕೀರ್ಣ ತ್ರಿವಿಧಿ ಎಂದು ಮುಂತಾಗಿ ವೈವಿಧ್ಯಮಯ ಸಾಹಿತ್ಯವನ್ನು ಸೃಷ್ಟಿಸಿದ್ದಾರೆ. ಇವರ ಸಾಹಿತ್ಯ, ವಚನ, ಕಾವ್ಯ ಮುಂದಿನ ಪೀಳಿಗೆಯ ಅಧ್ಯಯನಕ್ಕಾಗಿ ಅಧ್ಯಯನದ ಗುರು ಪೀಠವನ್ನು ಸ್ಥಾಪಿಸಬೇಕೆಂದು ಮನವಿಯಲ್ಲಿ ಕೋರಲಾಗಿದೆ.

ಈ ಸಂದರ್ಭದಲ್ಲಿ ಜಿಲ್ಲಾ ಭೋವಿ ಸಮಾಜದ ಅಧ್ಯಕ್ಷ ಪಿ. ಶ್ರೀನಿವಾಸ್, ಮಹಾನಗರ ಪಾಲಿಕೆ ಸದಸ್ಯ ಆರ್. ಶಿವಾನಂದ್, ವಿದ್ಯಾರ್ಥಿ ನಿಲಯದ ಅಧ್ಯಕ್ಷ ಹೆಚ್ ಮಂಜುನಾಥ್, ತಾಲ್ಲೂಕು ಅಧ್ಯಕ್ಷ ಚೌಡಪ್ಪ ಜಿ., ಸಮಾಜದ ಮುಖಂಡರಾದ ಎಸ್. ಹನುಮಂತಪ್ಪ, ಜಲ್ಲಿ ನಾಗರಾಜ್, ಚೌಡೇಶ್, ಆನಂದ್, ಶ್ರೀನಿವಾಸ್, ದಶರಥ, ರುದ್ರೇಶ್, ಮಂಜುನಾಥ್, ಧರ್ಮ, ವೀರೇಶ್, ಎ.ಎಸ್.ಮಂಜುನಾಥ ಇನ್ನಿತರರು ಉಪಸ್ಥಿತರಿದ್ದರು.

## ಸ್ವಾಮಿ ವಿವೇಕಾನಂದರು

ವಿಶ್ವನಾಥ ದತ್ತ ಭುವನೇಶ್ವರಿಯ ಸುತ
ವಿಶ್ವಕ್ಕೆ ವೇದಾಂತ ಸಾರಿದ ಪಿತ
ದೀನ ದುರ್ಬಲರ ಸಂತೈಸಿದ ಪುರುಷ
ಆಧ್ಯಾತ್ಮಕ್ಕೆ ನೀಡಿದರು ಹೊಸ ಸ್ಪರ್ಶ

ಪ್ರೀತಿ, ಕರುಣೆ ತುಂಬಿದ ಕಣ್ಣಿನ ಕಡಲು
ಭಾರತಾಂಬೆಯ ಸೇವೆಗೆ ಮುಡಿಪಿಟ್ಟ ಮಡಿಲು
ಅನಂತ ಜ್ಞಾನವ ತುಂಬಿದ ಅಕ್ಷಯ ಪಾತ್ರೆ
ದುರ್ಬಲರ ಉದ್ಧಾರಕ್ಕೆ ಮಾಡಿದ ದೇಶ - ವಿದೇಶಗಳ ಯಾತ್ರೆ

ಸಿಡಿಲಬ್ಬರದ ಮಿಂಚಿನ ನುಡಿ
ಯುವ ಪೀಳಿಗೆಯನ್ನು ಎಚ್ಚರಿಸಿ ಬೆಳಗಿದ ಕಿಡಿ
ಏಳಿ ಎದ್ದೇಳಿ ಎಂದು ಭಾರತೀಯರನ್ನು ಎಚ್ಚರಿಸಿದ ಸಂತ
ಅಧ್ಯಾತ್ಮದ ಹೂವು ಅರಳಿಸಿದ ಧೂತ

ಭಾರತದ ವೀರ ಸನ್ಯಾಸಿ, ವೇದಾಂತ ಕೇಸರಿ ಹಲವು ವಿಶೇಷಣ
ಇವರ ವಿಚಾರಗಳಿಗೆ ಬೇಕೆ ಬೇರೆ ಭೂಷಣ
ನಮಿಸೋಣ ಇಂತಹ ವೀರ ಪುರುಷನಿಗೆ ಅರ್ಪಿಸಿ ತನುಮನ
ಆಚರಿಸೋಣ ಗೌರವಿಸುವ 'ರಾಷ್ಟ್ರೀಯ ಯುವ ದಿನ'ವನ್ನ...

**- ಬಸವರಾಜ ಕರುವಿನ**, ಬಸವನಾಳು

## ವಿಶ್ವ ವಿಜೇತ ವಿವೇಕಾನಂದ



ಯುವಕರೇ ಪುರುಷ ಸಿಂಹ ರಾಗಿ
ಕ್ರಾಂತಿಯ ಕಿಡಿಗಳಾಗಿ
ಏಳಿ ಎದ್ದೇಳಿ ಎದ್ದೇಳಿ
ಗುರಿ ಮುಟ್ಟುವ ತನಕ ನಿಲ್ಲದಿರಿ
ಎಂಬ ಸಂದೇಶ ಸಾರಿದ
ಸ್ವಾಮಿ ವಿವೇಕಾನಂದರಿಗೆ
ನನ್ನ ನುಡಿ ನಮನ !

ನಿನ್ನ ಕನಸಿನ ಭವ್ಯ ಭಾರತ
ನಿರ್ಮಾಣ ಇನ್ನೂ ಸಾಧ್ಯವಾಗುತ್ತಿಲ್ಲ
ರಾಷ್ಟ್ರ ನಿರ್ಮಾಣಕ್ಕೆ ಯುವಶಕ್ತಿ
ಸದೃಢವಾಗಿ ಸೆಟೆದು ನಿಲ್ಲುತ್ತಿಲ್ಲ
ನವ ರಾಷ್ಟ್ರ ನಿರ್ಮಾಣಕ್ಕೆ
ಹುಮ್ಮಸ್ಸು ಉತ್ಸಾಹ ತೋರುತ್ತಿಲ್ಲ !

ಯುವಶಕ್ತಿ ಮರೆಯಾಗಿ
ಎಲ್ಲೆಲ್ಲೂ ಭ್ರಷ್ಟಾಚಾರ ಅನೈತಿಕತೆ ತಾಂಡವಾಡುತ್ತಿದೆ
ನಿನ್ನ ಸಂದೇಶ ಇಂದು ರಾಷ್ಟ್ರಕ್ಕೆ
ಹೆಚ್ಚು ಪ್ರಸ್ತುತ ಮತ್ತೊಮ್ಮೆ
ಹುಟ್ಟಿ ಬಾ ಪುರುಷ ಸಿಂಹನಾಗಿ !

ನೀ ಹೊತ್ತಿಸಿದ ಕ್ರಾಂತಿಯ ಕಿಡಿ
ಎಲ್ಲೆಡೆ ಬೆಳಕಾಗಿ ಹೊಳೆಯುತ್ತಿದೆ
ಯುವಶಕ್ತಿ ಜಾಗೃತವಾಗಿ
ಮುನ್ನಡೆಯಲು ನಿನ್ನಂಥವರ ಅಗತ್ಯತೆ ತುರ್ತಾಗಿ ರಾಷ್ಟ್ರ
ನಿರ್ಮಾಣಕ್ಕೆ ಬೇಕಾಗಿದೆ !

ಗುರುವಾಗಿ ವರವಾಗಿ ಯುವಶಕ್ತಿಯ ಕೇಂದ್ರ ಬಿಂದುವಾಗಿ
ರಾಷ್ಟ್ರದ ಕಣ್ಮಣಿಯಾಗಿ
ಮತ್ತೊಮ್ಮೆ ಹುಟ್ಟಿ ಬಾ ಗುರುವೇ
ನಿನ್ನ ಜಯಂತಿಗೆ ನನ್ನ ನುಡಿ ನಮನ !

**- ಜೆಂಬಿಗಿ ಮೃತ್ಯುಂಜಯ**
ಕನ್ನಡ ಉಪನ್ಯಾಸಕರು, ದಾವಣಗೆರೆ

## ಜ.22ರ ನಂತರ ಅಯೋಧ್ಯೆಗೆ ಭೇಟಿ : ಸಿದ್ದರಾಮಯ್ಯ

ಶಿವಮೊಗ್ಗ, ಜ. 12 - ಜನವರಿ 22ರ ನಂತರ ಅಯೋಧ್ಯೆಗೆ ಭೇಟಿ ನೀಡಿ ರಾಮನಿಗೆ ಪೂಜೆ ಸಲ್ಲಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಶಿವಮೊಗ್ಗದಲ್ಲಿ ಸುದ್ದಿಗಾರರೊಂದಿಗೆ ಮಾತನಾ ಡಿದ ಅವರು, ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಿಸಿ ಬಿಜೆಪಿ ರಾಜಕೀಯ ಮಾಡಲು ಹೊರ ಟಿದೆ, ದೇವರನ್ನು ರಾಜಕೀಯವಾಗಿ ಬಳಸಿಕೊಳ್ಳುವುದನ್ನು ವಿರೋಧಿಸುತ್ತೇವೆಯೇ ಹೊರತು, ರಾಮಚಂದ್ರನನ್ನು ವಿರೋಧಿಸುವುದಿಲ್ಲ ಎಂದರು. ಈ ತಿಂಗಳ 22ನೇ ತಾರೀಖಿನ ನಂತರ ಅಯೋಧ್ಯೆಗೆ ಭೇಟಿ ನೀಡುವುದಲ್ಲದೆ, ಇಡೀ ರಾಜ್ಯದಲ್ಲಿ ಪಕ್ಷದ ಕಾರ್ಯಕರ್ತರು ಸಹಾ ದೇವಾಲಯಕ್ಕೆ ತೆರಳಿ ಪೂಜೆ ಸಲ್ಲಿಸುತ್ತಾರೆ ಎಂದು ಹೇಳಿದರು. ಮೂವರು ಉಪಮುಖ್ಯಮಂತ್ರಿ ಸ್ಥಾನದ ಕುರಿತು ಚರ್ಚಿಸುವುದಿಲ್ಲ. ಗ್ಯಾರಂಟಿ ಯೋಜನೆಗಳಿಗೆ ಯಾರದ್ದೋ ದುಡ್ಡು, ಯಲ್ಲಮ್ಮನ ಜಾತ್ರೆ ಎಂಬ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಟೀಕೆ ಬರೀ ಸುಳ್ಳು. ಕುಮಾರಸ್ವಾಮಿ ಎಂದರೆ ಸುಳ್ಳು, ಸುಳ್ಳು ಎಂದರೆ ಕುಮಾರಸ್ವಾಮಿ, ಅವರ ಟೀಕೆಗೆ ಉತ್ತರಿಸುವುದಿಲ್ಲ ಎಂದರು.

ವಿರೋಧ ಪಕ್ಷಗಳು ತಮ್ಮ ಸರ್ಕಾರದ ಅವಧಿಯಲ್ಲಿ ಯಾವುದೇ ಗ್ಯಾರಂಟಿಗಳನ್ನು ನೀಡಿಲ್ಲವಾದ್ದರಿಂದ ಅವರಿಗೆ ಈ ಯೋಜನೆಗಳು ನುಂಗಲಾರದ ತುತ್ತಾಗಿವೆ ಎಂದರು.

## ಮಲೇಬೆನ್ನೂರಿನಲ್ಲಿ ಇಂದು ಅಯ್ಯಪ್ಪ ಸ್ವಾಮಿಯ ಪಡಿಪೂಜೆ



ಪಟ್ಟಣದ ಶ್ರೀ ಏಕನಾಥೇಶ್ವರಿ ದೇವಸ್ಥಾನದಲ್ಲಿ ಶ್ರೀ ಅಯ್ಯಪ್ಪ ಸ್ವಾಮಿ ಸೇವಾ ಸಮಿತಿ ವತಿಯಿಂದ ಇಂದು ಸಂಜೆ 7 ಗಂಟೆಗೆ ಪಡಿಪೂಜೆ ಹಾಗೂ ಅನ್ನ ಸಂತರ್ಪಣೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಪಿ.ಆರ್.ರಾಜು ಸ್ವಾಮಿ ತಿಳಿಸಿದ್ದಾರೆ.

## ಕೊಮಾರನಹಳ್ಳಿ : 5 ಹುಲ್ಲಿನ ಬಣವೆ ಭಸ್ಮ

ಮಲೇಬೆನ್ನೂರು, ಜ.12- ಕೊಮಾರನಹಳ್ಳಿಯ ಹೊಸೂರು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಸಮೀಪ ಹಾಕಿದ್ದ 5 ಹುಲ್ಲಿನ ಬಣವೆಗಳು ವಿದ್ಯುತ್ ಬೆಂಕಿ ಕಿಡಿಯಿಂದಾಗಿ ಸುಟ್ಟು ಭಸ್ಮವಾಗಿರುವ ಘಟನೆ ಶುಕ್ರವಾರ ಮಧ್ಯಾಹ್ನ ನಡೆದಿದೆ. ಅಗ್ನಿಶಾಮಕ ದವಳದವರು ಆಗಮಿಸಿ, ಬೆಂಕಿ ನಂದಿಸಿ ಹೆಚ್ಚಿನ ಹಾನಿ ತಪ್ಪಿಸಿದರು.


**ಕರ್ನಾಟಕ ಗೃಹ ಮಂಡಳಿ ಸೈಟ್ ಮಾರಾಟಕ್ಕೆ**
(ಕಮರ್ಷಿಯಲ್ ಆಗುವಂತಹ)
1) 40X60 ಉತ್ತರ 120 ಅಡಿ ರಸ್ತೆಗೆ
2)40X40 ಪಶ್ಚಿಮ, ದಕ್ಷಿಣ ಕಾರ್ನರ್ 60 ಅಡಿ ರಸ್ತೆ
ಕಿರಣ್ ಭೂಸನೂರ್
97315-63409- 98440-63409

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**Property Doctor / ಪ್ರಾಪರ್ಟಿ ಡಾಕ್ಟರ್**
ಈ ಸೈಟ್ ತೊಗೋಬಹುದಾ? ದಾಖಲೆಗಳು ಏನು ಬೇಕು? ಕಾನೂನು ಪ್ರಕಾರ ಸರಿ ಇದೇನಾ? ಲೋನ್ ಸಿಗುತ್ತಾ? ಈ ರೇಟಿಗೆ ನನ್ನ ಸೈಟ್ ಮಾರಾಟ ಮಾಡಬಹುದಾ? ಈ ಎಲ್ಲ ಮಾಹಿತಿ ಯನ್ನು ನಿಮಗೆ ಕೇವಲ 100/- ನಲ್ಲಿ ಕೊಡಲಾಗುವುದು
96325 54524

**ಉದ್ಯೋಗಾವಕಾಶ**
ನಮ್ಮ ಸಂಸ್ಥೆಯಿಂದ ಯುವತಿಯರಿಗೆ & ಮಹಿಳೆಯರಿಗೆ ಪ್ರಾಯೋಗಿಕ ತರಬೇತಿಯನ್ನು ನೀಡಿ ಹೆಸರಾಂತ ಕಂಪನಿಯಾದ ಸಂಜೀವಿನಿ ಹೆಲ್ತ್‌ಕೇರ್ ಸಂಸ್ಥೆಯಲ್ಲಿ ಉದ್ಯೋಗಾವಕಾಶ ನೀಡಲಾಗುತ್ತದೆ. ಸಂಬಳ, ಉಚಿತ ಊಟ, ವಸತಿಯೊಂದಿಗೆ 15000 ರಿಂದ 30,000, ವಿದ್ಯಾರ್ಹತೆ : 7ನೇ, 10ನೇ, ಪಿಯುಸಿ, ಡಿಗ್ರಿ, ಜಿಎನ್‌ಎಂ, ಎಎನ್‌ಎಂ
91486 83185

**1 BHK ಮನೆ ಬಾಡಿಗೆ / ಲೀಜ್‌ಗೆ ಇದೆ**
ಸಸ್ಯಹಾರಿಗಳಿಗೆ ಮಾತ್ರ
1 ನೇ ಮಹಡಿ ಕಾವೇರಮ್ಮ ಶಾಲೆ ಹತ್ತಿರ K B ಬಡಾವಣೆ ದಾವಣಗೆರೆ -2
ಮಧ್ಯವರ್ತಿಗಳಿಗೆ ಅವಕಾಶವಿಲ್ಲ
93434 75963,90367 26949

**WORK FROM HOME**
Available
91136 56191
Flexible timing,
Salary Proofs Available
2000 Candidates Enrolled

**ಮಳಿಗೆ ಬಾಡಿಗೆಗಿದೆ**
ನರಸರಾಜ ರಸ್ತೆ ಹಾಸಬಾವಿ ಸರ್ಕಲ್ ಹತ್ತಿರವಿರುವ ಆಲದಹಳ್ಳಿ ಕಾಂಪ್ಲೆಕ್ಸ್‌ನಲ್ಲಿ 13x16 1/2 (Gold Shop, Cloth Shop, Medical Shop, Kirani Shop) ಅಳತೆಯ ಮಳಿಗೆ ಬಾಡಿಗೆಗಿದೆ.
ಸಂಪರ್ಕಿಸಿರಿ
94801 75911

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**ವಧು ಬೇಕಾಗಿದೆ**
ಉದ್ಯೋಗಸ್ಥ ವ್ಯಕ್ತಿಗೆ 30 ವರ್ಷದೊಳಗಿನ ಯಾವುದೇ ಜಾತಿಯ ಸಂಗಾತಿ ಬೇಕಾಗಿದ್ದಾರೆ. 2ನೇ ಸಂಬಂಧಕ್ಕೂ ಆದ್ಯತೆ ಇದೆ.
7676 750280
( ವಾಟ್ಸ್ ಆ್ಯಪ್ ಅಥವಾ ಕಾಲ್ ಮಾಡಿ)

**ಮನೆ ಮಾರಾಟಕ್ಕೆ ಇದೆ**
ವಿಳಾಸ: #159, 1ನೇ ಮುಖ್ಯ ರಸ್ತೆ, 5ನೇ ಕ್ರಾಸ್, ಬಿ ಬ್ಲಾಕ್, ದೇವರಾಜ್ ಅರಸ್ ಬಡಾವಣೆ, ದಾವಣಗೆರೆ.
99005 21848
ಮಧ್ಯವರ್ತಿಗಳಿಗೆ ಅವಕಾಶ ಇರುವುದಿಲ್ಲ.

**WANTED**
R.V. Transformer's mfg. co.
Lokikere Road, Industrial Area, Davangere-577 005.
Work's : Basic Computer Works
79758 93133

**ಮನೆಗಳು ಲೀಸ್‌ಗಿವೆ**
2 BHK, 3BHK ಇಂಡಿಪೆಂಡೆಂಟ್ ಹೌಸ್, 5ನೇ ಮೇನ್, 5ನೇ ಕ್ರಾಸ್, ಸೆಂಟ್ ಪಾಲ್ಸ್ ಕಾನ್ವೆಂಟ್ ರೋಡ್, ಪಿ.ಜೆ. ಬಡಾವಣೆ, ದಾವಣಗೆರೆ. ಸಂಪರ್ಕಿಸಿ :
88616 89590

**WANTED**
Experienced Salesman or Sales Girls
Samyak Ceramics
Hadadi road, Davangere
96200 95520, 98450 81234

**Executive / Manager**
(Attractive Salary + incentives)
89700 66666
99645 46667

**ಮನೆ ಬಾಡಿಗೆಗೆ ಇದೆ**
ತರಳಬಾಳು ಬಡಾವಣೆ, ಡೋ.ನಂ. 2000/53, 12ನೇ ಕ್ರಾಸ್ 1ನೇ ಮುಖ್ಯರಸ್ತೆ, ಮೊದಲ ಮಹಡಿ ಮನೆ ಖಾಲಿ ಇದೆ. 2 ಬೆಡ್ ರೂಂ, 24 ಗಂಟೆ ನೀರಿನ ಸೌಲಭ್ಯ. ಸಸ್ಯಹಾರಿಗಳಿಗೆ ಮಾತ್ರ.
ಮೊ: 80730 81328

**'ಮಚ್ಚಿ' ಫಿಶ್ ಫ್ರೈ ಹೋಟೆಲ್**
ಸಮುದ್ರದ ತಾಜಾ ಮೀನುಗಳನ್ನು ಮಂಗಳೂರು ಶೈಲಿಯಲ್ಲಿ ತವಾ ಫ್ರೈ ಮಾಡಲಾಗುತ್ತದೆ. ಹಳೇ ಬೆತೂರು ರಸ್ತೆ, ಶ್ಯಾವಿಗೆ ಮಶಿನ್ ಹತ್ತಿರ, ದಾವಣಗೆರೆ.
63646 78760

**ಮನೆ ಬಾಡಿಗೆಗೆ ಇದೆ**
ಹೊಂಡದ ಸರ್ಕಲ್‌ನ ಖಂಡಪ್ಪನ ಗಲ್ಲಿಯಲ್ಲಿ 13x45 ಅಳತೆಯ ಒಂದನೇ ಮಹಡಿ ಮನೆ ಸೋಲಾರ್, ನೀರು ಸೌಲಭ್ಯವಿರುವ ಮನೆ ಬಾಡಿಗೆಗೆ ಇದೆ.
94480 47506

**ಸ್ಕೂಲ್ ಮಾರಾಟಕ್ಕಿದೆ**
ನರ್ಸರಿ ಮತ್ತು 1 ರಿಂದ 8ನೇ ತರಗತಿ ಇರುವ ಇಂಗ್ಲಿಷ್ ಮೀಡಿಯಂ ಸ್ಕೂಲ್ ಮಾರಾಟಕ್ಕಿದೆ. ಸ್ಥಳ: ಲೋಕಿಕೆರೆ,ದಾವಣಗೆರೆ ತಾಲ್ಲೂಕು.
70229 36433


**ಮನೆ ಬಾಡಿಗೆಗೆ ಇದೆ**
2ನೇ ಮಹಡಿಯಲ್ಲಿ ಪೂರ್ತಿ ಸುಸಜ್ಜಿತವಾದ 1 BHK ಹೊಸ ಮನೆ ಬಾಡಿಗೆಗಿದೆ. ನಿಜಲಿಂಗಪ್ಪ ಲೇಔಟ್, ಲಕ್ಷ್ಮಿ ಫ್ಲೋರ್ ಮಿಲ್ ಹತ್ತಿರ, ದಾವಣಗೆರೆ.
96327 17930

**WANTED**
Banking Sector Job Openings
(Female Only)
Qualification : Any Degree.
90715 55081
Interview Time - 11AM

**ಬಾಡಿಗೆಗೆ ಇದೆ**
ಸಿಂಗಲ್ ಬೆಡ್ ರೂಮ್ ಮೊದಲನೇ ಮಹಡಿ ಮನೆ ಎಸ್.ಎಸ್. ಲೇಔಟ್ 'A' ಬ್ಲಾಕ್, 17th ಕ್ರಾಸ್. ಸಂಪರ್ಕಿಸಿ :
99725 91568

**ವಾಟರ್ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.

**SKIN, HAIR & BODY CARE**



* Ayurvedic Massages
* Swedishi Massages
* Pain relief Massages
Full Body Relaxation
NOW AT DAVANGERE
87923 31569

**ಹೆಸರು ಬದಲಾವಣೆ**
ನಾನು ಶ್ರೀಮತಿ ಜಿ.ಆರ್. ಆಶಾ ಕೋಂ ಲೇ. ಕೆ.ಬಿ. ಬಸವರಾಜಪ್ಪ ಕೊಡಗನೂರು ಗ್ರಾಮ, ದಾವಣಗೆರೆ ತಾ॥ ವಾಸಿಯಾದ ನಾನು ನನ್ನ ಶಾಲಾ ದಾಖಲೆಗಳಲ್ಲಿ, ನನ್ನ ಹೆಸರು ಜಿ.ಆರ್. ಬಬಿತಾ ಎಂದು ನಮೂದಾಗಿದ್ದು, ನನ್ನ ವಿವಾಹದ ನಂತರ ನನ್ನ ಹೆಸರನ್ನು ಜಿ.ಆರ್. ಆಶಾ ಎಂದಾಗಿರುತ್ತದೆ. ಆದ್ದರಿಂದ ಇನ್ನು ಮುಂದೆ ನನ್ನ ಎಲ್ಲಾ ವ್ಯವಹಾರಗಳಲ್ಲೂ ದಾಖಲೆಗಳಲ್ಲೂ ನನ್ನ ಹೆಸರು ಜಿ.ಆರ್. ಆಶಾ ಎಂಬ ಹೆಸರಿನಲ್ಲಿ ಮುಂದುವರೆಯುತ್ತೇನೆಂದು ದಿನಾಂಕ : 12.01.2024 ರಂದು ನೋಟರಿ ದಾವಣಗೆರೆಯವರ ಮುಂದೆ ಪ್ರಮಾಣ ಮಾಡಿದ್ದೇನೆ. ಸಹಿ/- ಜಿ.ಆರ್. ಆಶಾ

**ಕೃಷಿ ಜಮೀನು ಮಾರಾಟಕ್ಕಿದೆ**
ಚನ್ನಗಿರಿಯಿಂದ 15 ಕಿ.ಮೀ. ದೂರದಲ್ಲಿ 3 ಎಕರೆ ಕೃಷಿ ಜಮೀನು ಮಾರಾಟಕ್ಕಿದೆ.
ವಿ.ಸೂ. ಮಧ್ಯವರ್ತಿಗಳಿಗೆ ಅವಕಾಶವಿರುವುದಿಲ್ಲ.
63624 97833

**ಕೆಲಸಕ್ಕೆ ಬೇಕಾಗಿದ್ದಾರೆ**
ಕಿರಾಣಿ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವಿರುವ ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ :
98458 63708
86603 26067

**ಕಛೇರಿಗೆ ಕಟ್ಟಡ ಬಾಡಿಗೆಗಿದೆ**
ದಾವಣಗೆರೆಯ ಕೆ.ಬಿ ಬಡಾವಣೆಯ ಲಾಯರ್ (ಕುವೆಂಪು) ರಸ್ತೆಯಲ್ಲಿ ಪಿಎಲ್‌ಡಿ ಬ್ಯಾಂಕ್ ಕಟ್ಟಡದಲ್ಲಿ ಕೆಳ ಅಂತಸ್ತಿನಲ್ಲಿ ಕಛೇರಿಗೆ 40×40 ಅಳತೆಯ ಸುಸಜ್ಜಿತವಾದ ಕಟ್ಟಡ ಬಾಡಿಗೆಗಿದೆ . ಆಸಕ್ತರು ಸಂಪರ್ಕಿಸಿ:
9480177703 , 9449581188

**ಮನೆಯ ಮೂಲ ಕ್ರಯ ಪತ್ರ ಕಳೆದಿರುತ್ತದೆ**
ಜೆ. ಮಲ್ಲಿಕಾರ್ಜುನಪ್ಪ ತಂದೆ ದೊಡ್ಡ ಕಾಳಪ್ಪ ಇವರ ತಾಯಿ ಶ್ರೀಮತಿ ಬಸಮ್ಮ ದೊಡ್ಡಕಾಳಪ್ಪ ಹೆಸರಿನಲ್ಲಿರುವ ದಾವಣಗೆರೆ ಸಿಟಿ, ದೇವರಾಜ್ ಅರಸು ಬಿ ಬ್ಲಾಕ್‌ನಲ್ಲಿರುವ #90, ಅಳತೆ 40x60 ಅಡಿವುಳ್ಳ ಸ್ವತ್ತಿನ ಮೂಲ ಕ್ರಯಪತ್ರ ಮನೆ ಸ್ವಚ್ಛಗೊಳಿಸುವಾಗ ಕಳೆದಿರುತ್ತದೆ. ಸದರಿ ಪತ್ರ ಸಿಕ್ಕವರು ಈ ನಂ. ತಿಳಿಸಿ.
98440 98899

**ಕ್ರೆಡಿಟ್ ಕೋ-ಆಪ್ ಸೊಸೈಟಿಗೆ ಬೇಕಾಗಿದ್ದಾರೆ**
ಕಾರ್ಯದರ್ಶಿ - B.Com - 1
ಅಕೌಂಟೆಂಟ್ - B.A or B.Com - 1
ಸಹಾಯಕರು - B.A or PUC - 1
ಸಂಪರ್ಕಿಸಿ : ವ್ಯವಸ್ಥಾಪಕರು
99802 40407
ಮಹಿಳೆಯರಿಗೆ ಹೆಚ್ಚಿನ ಆದ್ಯತೆ

**WANTED**
Banking Sector Field Officer (Male Only)
Qualification : Any Degree.
90715 55081
Interview Time - 11AM

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**



ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.
ದಾವಣಗೆರೆ : 2 & 3ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ॥ ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೆಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**ದಾನಿಶ್ ಅಕ್ವೇರಿಯಂ ಹೋಂ ಡೆಕೋರ್**
2ನೇ ವರ್ಷದ ವಾರ್ಷಿಕದ ಮಹೋತ್ಸವ ಅಂಗವಾಗಿ
ದಿನಾಂಕ : 11.01.2024 ರಿಂದ 13.01.2024 ಮೂರು ದಿನಗಳ ಭಾರೀ ರಿಯಾಯಿತಿ ಮಾರಾಟ
#795/20, ಎಸ್.ಎಸ್. ಹೈಟೆಕ್ ಹಾಸ್ಪಿಟಲ್ ರಸ್ತೆ, ಜಯನಗರ, ಎ ಬ್ಲಾಕ್, ದಾವಣಗೆರೆ.
98453 70694

**ಮೆಡ್ ಕ್ಯೂರ್**
ಔಷಧಿ ಅಂಗಡಿಯಲ್ಲಿ ಕೆಲಸಕ್ಕೆ ಹುಡುಗ / ಹುಡುಗಿಯರು ಬೇಕಾಗಿದ್ದಾರೆ. ವಿಳಾಸ : 60 feet Road, Nittuvalli, Davanagere.
73534 14917

**ಮನೆ ಬಾಡಿಗೆಗೆ ವಿಚಾರಿಸಿ**
ಪಿ.ಜೆ. ಬಡಾವಣೆಯಲ್ಲಿರುವ #397ರ 8ನೇ ಕ್ರಾಸ್, 8ನೇ ಮೇನ್ ರೋಡ್, ಮಹಾತ್ಮ ಗಾಂಧಿ ಲ್ಯಾಬ್ ಹತ್ತಿರದಲ್ಲಿರುವ ಮೊದಲನೇ ಅಂತಸ್ತನ್ನು 20x40ರ ಅಳತೆ, 2ಬೆಡ್ ರೂಮ್ ಓಪನ್ ಹಾಲ್ ಕಿಚನ್ ಅಟ್ಯಾಚ್ಡ್ ಬೆಡ್ ರೂಂ ಇರುವ ಮನೆ ಬಾಡಿಗೆಗೆ ಇದೆ ವಿಚಾರಿಸಿ.
94482 48242, 78927 53714

**ಹೊಸ ಮನೆ ಮಾರಾಟಕ್ಕಿದೆ**
20x30 ಸೈಜಿನ ಹೊಸ ಡೂಪ್ಲೆಕ್ಸ್ ಮನೆ ಮಾರಾಟಕ್ಕಿದೆ. ಸ್ಥಳ : ಆರ್. ಟಿ.ಓ. ಆಫೀಸ್ ಎದುರು, BSNL ಆಫೀಸ್ ಹಿಂಭಾಗ, ಪಿ.ಬಿ. ರೋಡ್, ದಾವಣಗೆರೆ.
74114 72169

**ಸೈಟು ಮಾರಾಟಕ್ಕಿದೆ**
ಹರಿಹರದಿಂದ ಹರಪನಹಳ್ಳಿಗೆ ಹೋಗುವ ರಸ್ತೆಯ ಗುತ್ತೂರಿನ Cloud-9 ಶಾಲೆ ಮತ್ತು ಬಸವೇಶ್ವರ ಬಡಾವಣೆಯ ಮಧ್ಯದಲ್ಲಿ ಸರ್ವೆ ನಂ. 125 ಹೊಸ ಬಡಾವಣೆಯಲ್ಲಿ ಸೈಟುಗಳು ಮಾರಾಟಕ್ಕಿವೆ. ಸಂಪರ್ಕಿಸಿ.
8197300410, 81399 88555

**ಜಮೀನು ಕೊಳ್ಳಲು ಬೇಕಾಗಿರುತ್ತದೆ**
@ ದಾವಣಗೆರೆ ಹತ್ತಿರ, ರೂ. 15 ಲಕ್ಷ ದಿಂದ 20 ಲಕ್ಷ ಎಕರೆಗೆ.
ಶರ್ಮಾ
63608 66007

**ಸೈಟು ಮಾರಾಟಕ್ಕಿದೆ**
#2366/6, 30x50 ಅಳತೆ ಚಿಕ್ಕಮ್ಮಣ್ಣಿ ದೇವರಾಜ್ ಅರಸ್ ಬಡಾವಣೆ, 1ನೇ ಮುಖ್ಯರಸ್ತೆ, 3ನೇ ಅಡ್ಡ ರಸ್ತೆ, ಪಶ್ಚಿಮ ದಿಕ್ಕು.
(ಮಧ್ಯವರ್ತಿಗಳಿಗೆ ಅವಕಾಶವಿಲ್ಲ)
97316 07724

**ACCOUNTANT REQUIRED**
Experienced accountant Required for reputed Plywood Company in APMC YARD. Opp: DCM TOWNSHIP DAVANGERE.
94477 23005

**ನೇರ ಪರೀಕ್ಷೆಗಳು**
SSLC , PUC
NTC - ನರ್ಸರಿ ಟೀಚರ್ಸ್ ಟ್ರೇನಿಂಗ್
BA, B.Com, MA, M.Com, MBA (ALL),
ಶ್ರೀ ಗಂಗೋತ್ರಿ ಕರಸ್ಪಾಂಡೆನ್ಸ್ ಕಾಲೇಜ್
ಮೋತಿ ಸ್ಟ್ರೀಟ್/ ಟ್ರೆಂಡ್ಸ್ ಪಕ್ಕ, ಪಿ.ಬಿ. ರಸ್ತೆ, ದಾವಣಗೆರೆ
86602 35013

**WANTED**
Sharp Photocopier Machines Service Engineer (ITI or Dimpoma) Two-Wheeler Compulsory
Gaurav Communications
Davanagere. Contact :
94487 28866

**ಕಾಟೇರಮ್ಮ ಜ್ಯೋತಿಷ್ಯಾಲಯ**
ಸ್ಥಳ : ಹೊಸೂರು.
ಪಂಡಿತ್ ಮೋಡಿ ಚೌಡಪ್ಪ
ಕೇರಳದ ಅಷ್ಟ ಮಂಗಲ ಪ್ರಶ್ನೆ, ಆರೂಢ ಪ್ರಶ್ನೆ, ದೈವ ಪ್ರಶ್ನೆ, ಕವಡೆ ಪ್ರಶ್ನೆ, ಮುಖಲಕ್ಷಣ, ಜನ್ಮದಿನಾಂಕ ನೋಡಿ ಸಂಪೂರ್ಣ ಭವಿಷ್ಯವನ್ನು ಫೋನಿನ ಮುಖಾಂತರ ಹೇಳಲಾಗುವುದು. ಗಂಡ-ಹೆಂಡತಿ ಕಲಹ, ಸ್ತ್ರೀ ಪುರುಷ ವಶೀಕರಣ, ಇನ್ನಿತರ ವಶೀಕರಣ ಸ್ಪೆಷಲಿಸ್ಟ್. 2 ದಿನಗಳಲ್ಲಿ ಪರಿಹಾರ, ನಿಮ್ಮ ಎಲ್ಲಾ ಸಮಸ್ಯೆಗಳನ್ನು ಗುಪ್ತವಾಗಿಡಲಾಗುವುದು. ಇಂದೇ ಕರೆ ಮಾಡಿ.
98801-44819

**2 BHK FLAT FOR SALE**
1250 Sq. ft., 2 Balconies. 2nd Floor, Lift and Power-back Present.
Location : Shankuntala Park View, MCC 'B' Block, 7th Main, Davanagere.
CONTACT- WhatsApp only to
+91- 9742521922

**HOUSE FOR RENT**
1st floor- 2 BHK & Having solar water & borewel water facility available for rent, # 1982/ 2, 6th Cross, siddaveerappa layout, DVG.
94806 93506, 82777 97633

# ಅಪ್ರಾಪ್ತರ ವಾಹನ ಚಾಲನೆಗೆ ಪೊಲೀಸರ ಎಚ್ಚರಿಕೆ : ಪೋಷಕರಿಗೂ ದಂಡದ ಜೊತೆ ಶಿಕ್ಷೆ ಎಂದ ಎಎಸ್ಪಿ



ದಾವಣಗೆರೆ, ಜ. 12 – ಅಪ್ರಾಪ್ತ ವಯಸ್ಸಿನ ವಾಹನ ಚಾಲಕರು ಹಾಗೂ ವಾಹನಗಳ ಮಾಲೀಕರಿಗೆ ಜಿಲ್ಲಾ ಪೊಲೀಸರು ಎಚ್ಚರಿಕೆ ನೀಡಿದ್ದು, ದಂಡದ ಜೊತೆಗೆ ಶಿಕ್ಷೆಯನ್ನೂ ಎದುರಿಸಬೇಕಾಗುತ್ತದೆ ಎಂದು ತಿಳಿಸಿದ್ದಾರೆ.

ರಸ್ತೆ ಸುರಕ್ಷತಾ ಸಪ್ತಾಹದ ಅಂಗವಾಗಿ ನಗರದ ಸಂಚಾರ ವೃತ್ತ ನಿರೀಕ್ಷಕರ ಕಚೇರಿ ಆವರಣದಲ್ಲಿ ಜಿಲ್ಲಾ ಪೊಲೀಸ್ ಇಲಾಖೆ ವತಿಯಿಂದ ಇಂದು ಸಂಜೆ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಅಪ್ರಾಪ್ತರು ಹಾಗೂ ವಾಹನ ಮಾಲೀಕರಿಗೆ ಈ ತಿಳುವಳಿಕೆ ನೀಡಲಾಗಿದೆ.

ಕಾರ್ಯಕ್ರಮದಲ್ಲಿ ಮಾತನಾಡಿದ ಎಎಸ್ಪಿ ವಿಜಯಕುಮಾರ್ ಎಂ. ಸಂತೋಷ್, ಅಪ್ರಾಪ್ತರು ವಾಹನ ಚಲಾಯಿಸಿದರೆ ನ್ಯಾಯಾಲಯವು ಪಾಲಕರಿಗೆ 25 ಸಾವಿರ ರೂ.ವರೆಗೆ ದಂಡದ ಜತೆಗೆ ಶಿಕ್ಷೆಯನ್ನೂ ನೀಡಬಹುದು. ವಾಹನ ವಶಪಡಿಸಿಕೊಂಡು ಚಾಲನಾ ಪರವಾನಗಿ ರದ್ದುಪಡಿಸಲಾಗುವುದು. ಈ ಅಪ್ರಾಪ್ತರಿಗೆ 25 ವರ್ಷದವರೆಗೆ ಡ್ರೈವಿಂಗ್ ಲೈಸೆನ್ಸ್ ನೀಡದಿರುವ ಕಾನೂನಿದೆ ಎಂದು ಹೇಳಿದರು.

ದಾವಣಗೆರೆಯಲ್ಲಿ ಬೈಕ್ ಚಲಾಯಿಸುತ್ತಿದ್ದ 18 ವರ್ಷ ವರ್ಷದೊಳಗಿನ 34 ಮಕ್ಕಳನ್ನು ಸಂಚಾರ ಠಾಣೆ ಪೊಲೀಸರು ಹಿಡಿದು ಪಾಲಕರಿಗೆ ಜಾಗೃತಿ ಮೂಡಿಸಿದ್ದಾರೆ. ಪ್ರಕರಣ ದಾಖಲಿಸದೆ ತಿಳಿವಳಿಕೆ ನೀಡುತ್ತಿದ್ದೇವೆ. ಇದೇ ಪ್ರವೃತ್ತಿ ಮುಂದುವರೆದಲ್ಲಿ ಪಾಲಕರಿಗೆ ದಂಡ, ಶಿಕ್ಷೆ ತಪ್ಪಿದ್ದಲ್ಲ ಎಂದು ಹೇಳಿದರು.

ದಾವಣಗೆರೆ ಜಿಲ್ಲೆಯಲ್ಲಿ ಕಳೆದ ವರ್ಷ ರಸ್ತೆ ಅಪಘಾತಗಳಲ್ಲಿ 284 ಮಂದಿ ಮೃತಪಟ್ಟಿದ್ದಾರೆ, 700 ಜನ ಗಾಯಗೊಂಡಿದ್ದಾರೆ. ಹೀಗಾಗಿ ಮಕ್ಕಳು ವಾಹನ ಚಲಾಯಿಸಲು ಪಾಲಕರು ಅನುಮತಿ ನೀಡಬಾರದು ಎಂದರು.

ನಗರ ಡಿವೈಎಸ್ಪಿ ಮಲ್ಲೇಶ್ ದೊಡ್ಮನಿ ಮಾತನಾಡಿ, ಕರೋನಾಗಿಂತ ರಸ್ತೆ ಅಪಘಾತಗಳಲ್ಲಿ ನಾಲ್ಕು ಪಟ್ಟು ಹೆಚ್ಚು ಸಾವು ಸಂಭವಿಸಿವೆ. ಬೈಕ್ ಕ್ರೇಜ್‌ನಿಂದಾಗಿ ಅಪ್ರಾಪ್ತ ಮಕ್ಕಳು ಅಜಾಗರೂಕ, ಅತಿ ವೇಗದ ಚಾಲನೆ ಮಾಡುತ್ತಾ ಅಪಘಾತಕ್ಕೆ ಕಾರಣವಾಗಬಹುದು. ಈ ಕಾರಣದಿಂದ ಮಕ್ಕಳ ಕೈಗೆ ಬೈಕ್ ನೀಡಬಾರದು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಪ್ರೊಬೇಷನರಿ ಡಿವೈಎಸ್ಪಿ ಯಶವಂತ್, ಸಂಚಾರ ಠಾಣೆ ಪಿಎಸ್‌ಐ ಶೈಲಜಾ, ಕೆಟಿಜೆ ನಗರ ಠಾಣೆ ಪಿಎಸ್‌ಐ ಯು.ಜಿ.ಶಶಿಧರ, ಬಸವನಗರ ಠಾಣೆ ಸಿಪಿಐ ಗುರುಬಸವರಾಜ್, ಬಡಾವಣೆ ಠಾಣೆ ಪಿಎಸ್‌ಐ ಮಲ್ಲಮ್ಮ ಚೌಬೆ ಇತರರಿದ್ದರು.

# ಆಟೋ ಚಾಲಕರು ಸಂಚಾರ ನಿಯಮ ಕಡ್ಡಾಯವಾಗಿ ಪಾಲಿಸಬೇಕು

## ಆಟೋ ಚಾಲಕರಿಗೆ ರಸ್ತೆ ಸುರಕ್ಷತಾ ಅರಿವು ಕಾರ್ಯಕ್ರಮದಲ್ಲಿ ಎಸ್ಪಿ ಉಮಾ ಪ್ರಶಾಂತ್



ದಾವಣಗೆರೆ, ಜ.12- ಆಟೋ ಚಾಲಕರು ಕಡ್ಡಾಯವಾಗಿ ಸಂಚಾರ ನಿಯಮಗಳನ್ನು ಪಾಲಿಸಬೇಕು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಮತಿ ಉಮಾ ಪ್ರಶಾಂತ್ ಸೂಚಿಸಿದರು.


ಜಿಲ್ಲಾ ಪೊಲೀಸ್ ಇಲಾಖೆ ವತಿಯಿಂದ ನಗರದ ಆಟೋ ಚಾಲಕರು ಹಾಗೂ ಮಾಲೀಕರುಗಳಿಗೆ ರಸ್ತೆ ಸುರಕ್ಷತೆಯ ಬಗ್ಗೆ ಅರಿವು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಆಟೋ ಚಾಲಕರು ಹಾಗೂ ಮಾಲೀಕರ ಸಮಸ್ಯೆಗಳಿಗೆ ನಮ್ಮ ಪೊಲೀಸ್ ಪರಿಮಿತಿಯಲ್ಲಿ ಆಗುವಂತಹ ಎಲ್ಲಾ ಪರಿಹಾರಗಳನ್ನು ಒದಗಿಸಲಾಗುವುದು. ಹಲವು ಆಟೋ ಡ್ರೈವರ್‌ಗಳು ತಮ್ಮ ಪ್ರಾಮಾಣಿಕತೆ ಮೆರೆದಿದ್ದಾರೆ. ಇತ್ತೀಚಿಗೆ ಹಲವಾರು ಆಟೋ ಚಾಲಕರು, ಪ್ರಯಾಣಿಕರು ಆಟೋದಲ್ಲಿ ಪ್ರಯಾಣಿಸುವಾಗ ಬಿಟ್ಟು ಹೋದಂತಹ ವಸ್ತುಗಳನ್ನು ಮರಳಿಸಿದ್ದು ಅದಕ್ಕಾಗಿ, ಅವರನ್ನು ಅಭಿನಂದಿಸುವುದಾಗಿ ತಿಳಿಸಿದರು.

ಎಲ್ಲಾ ನಗರಗಳಲ್ಲೂ ಆಟೋ ಚಾಲಕರನ್ನು ಸಾಂಸ್ಕೃತಿಕ ಪರಿಚಾರಕರು ಎಂದು ಹೇಳಲಾಗುತ್ತದೆ. ಯಾಕೆಂದರೆ ನಗರದ ಬಗ್ಗೆ, ಜಿಲ್ಲೆಯ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಪ್ರಯಾಣಿಕರಿಗೆ ನೀಡುವವರೇ ಚಾಲಕರಾಗಿರುತ್ತಾರೆ ಎಂದು ಎಸ್ಪಿ ಪ್ರಶಂಸಿಸಿದರು.

ಕಾರ್ಯಕ್ರಮದಲ್ಲಿ ಹೆಚ್ಚುವರಿ ಪೊಲೀಸ್ ಅಧೀಕ್ಷಕರಾದ ವಿಜಯಕುಮಾರ್ ಸಂತೋಷ್, ಮಂಜುನಾಥ ಜಿ, ಡಿವೈಎಸ್ಪಿ ಬಸವರಾಜ್ ಬಿ. ಎಸ್, ಪ್ರಕಾಶ್ ಪಿ. ಬಿ, ಸಂಚಾರ ಪೊಲೀಸ್ ವೃತ್ತ ನಿರೀಕ್ಷಕ ಮಂಜುನಾಥ ನಲವಾಗಲು ಉಪಸ್ಥಿತರಿದ್ದರು. ಪೊಲೀಸ್ ಅಧಿಕಾರಿಗಳು, ಸಿಬ್ಬಂದಿಗಳು ಮತ್ತು ಆಟೋ ಚಾಲಕರ ಸಂಘದ ಅಧ್ಯಕ್ಷ ಅಣ್ಣಪ್ಪ ಸ್ವಾಮಿ, ಕೊಟ್ರೇಶಪ್ಪ, ಮಂಜುನಾಥ, ಮಾರುತಿ ಮತ್ತಿತರೆ ಆಟೋ ಚಾಲಕರು ಮತ್ತು ಮಾಲೀಕರು ಹಾಜರಿದ್ದರು

## ನಗರದಲ್ಲಿ ಇಂದು ಅಟಲ್ ಬಿಹಾರಿ ವಾಜಪೇಯಿ ಜನ್ಮದಿನ ಇಂದು



ದಾವಣಗೆರೆ, ಜ. 12- ಅಟಲ್ ಬಿಹಾರಿ ವಾಜಪೇಯಿ ಅಭಿಮಾನಿಗಳ ಬಳಗ ಮತ್ತು ಜಿಲ್ಲಾ ಬಿಜೆಪಿ ಹಿರಿಯ ನಿಷ್ಠಾವಂತ ಕಾರ್ಯಕರ್ತರ ವೇದಿಕೆಯಿಂದ ನಾಳೆ ದಿನಾಂಕ 13ರ ಶನಿವಾರ ನಗರದ ಅಕ್ಕಮಹಾದೇವಿ ಕಲ್ಯಾಣ ಮಂಟಪದಲ್ಲಿ ಅಟಲ್ ಬಿಹಾರಿ ವಾಜಪೇಯಿ ಜಯಂತ್ಯುತ್ಸವ ಹಮ್ಮಿಕೊಳ್ಳಲಾಗಿದೆ ಎಂದು ಬಳಗದ ಅಧ್ಯಕ್ಷ ಎಂ.ಪಿ. ಕೃಷ್ಣಮೂರ್ತಿ ತಿಳಿಸಿದ್ದಾರೆ.

ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಿಗ್ಗೆ 11.30ಕ್ಕೆ ಬಿಜೆಪಿ ಮಾಜಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ. ಟಿ. ರವಿ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕ ಬಿ.ಪಿ. ಹರೀಶ್, ಮಾಜಿ ಸಚಿವ ಎಸ್.ಎ. ರವೀಂದ್ರನಾಥ್, ಮಾಜಿ ಮುಖ್ಯ ಸಚೇತಕ ಡಾ.ಎ.ಹೆಚ್. ಶಿವಯೋಗಿಸ್ವಾಮಿ, ಮಾಜಿ ಶಾಸಕರುಗಳಾದ ಟಿ.ಗುರುಸಿದ್ದನಗೌಡ, ಎಂ.ಪಿ. ರೇಣುಕಾಚಾರ್ಯ, ಮಾಡಾಳ್ ವಿರೂಪಾಕ್ಷಪ್ಪ, ಎಸ್.ವಿ. ರಾಮಚಂದ್ರಪ್ಪ, ಪ್ರೊ.ಲಿಂಗಣ್ಣ ಇತರರು ಆಗಮಿಸಲಿದ್ದಾರೆ ಎಂದು ತಿಳಿಸಿದರು.

ವೇದಿಕೆಯ ಗೌರವಾಧ್ಯಕ್ಷ ಆವರಗೊಳ್ಳದ ಬಿ.ಎಂ. ಷಣ್ಮುಖಯ್ಯ ಮಾತನಾಡಿ, ದಾವಣಗೆರೆಗೆ ಶ್ರೀರಾಮ ರಥಯಾತ್ರೆ ಆಗಮಿಸಿದ್ದಾಗ ಹುತಾತ್ಮರಾದ ಕುಟುಂಬಕ್ಕೆ 10 ಸಾವಿರ ರೂ. ಹಾಗೂ ಸೆರೆಮನೆ ವಾಸ ಅನುಭವಿಸಿ ಬಂದ ಕುಟುಂಬಕ್ಕೆ 5 ಸಾವಿರ ರೂ. ಗೌರವ ಧನ ನೀಡಿ ಗೌರವಿಸಲಾಗುವುದು ಎಂದು ತಿಳಿಸಿದರು.

ಉಪಾಧ್ಯಕ್ಷ ಆರ್.ಪ್ರತಾಪ್ ಮಾತನಾಡಿ, ರಾಷ್ಟ್ರೀಯ ಚತುಷ್ಪಥ ಹೆದ್ದಾರಿಗೆ ಅಟಲ್ ಬಿಹಾರಿ ವಾಜಪೇಯಿ ಅವರ ಹೆಸರು ನಾಮಕರಣ ಮಾಡಬೇಕು. ವಾಜಪೇಯಿ ಅವರ ಜಯಂತ್ಯುತ್ಸವವನ್ನು ಸರ್ಕಾರವೇ ಆಚರಿಸಬೇಕು ಎಂದು ಆಗ್ರಹಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಹೆಚ್.ಎಸ್. ಲಿಂಗರಾಜ್, ಶಿವಶಂಕರ್, ರಾಮಚಂದ್ರ ವಾದೋನೆ, ಮಾಲತೇಶ್ ಗುಪ್ತ, ಸರೋಜಮ್ಮ ದೀಕ್ಷಿತ್, ಪ್ರಭಾವತಿ ಇತರರು ಇದ್ದರು.

## ರಾಣೇಬೆನ್ನೂರಿನಲ್ಲಿ ನೇತ್ರ ತಪಾಸಣೆ

ಲಯನ್ಸ್ ಕ್ಲಬ್, ಕಂಚಿಕಾಮಕೋಟಿ ಮೆಡಿಕಲ್ಸ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ನೇತ್ರ ಸಂಚಾರಿ ಘಟಕದ ಸಹಯೋಗದಿಂದ ಮೆಡ್ಲೇರಿ ರಸ್ತೆ ಶಾಲೆಯಲ್ಲಿ ಉಚಿತ ನೇತ್ರ ತಪಾಸಣಾ ಶಿಬಿರವು ಇಂದು ನಡೆಯಲಿದ್ದು, ಶಸ್ತ್ರ ಚಿಕಿತ್ಸೆ ಅವಶ್ಯವಿದ್ದವರಿಗೆ ಶಂಕರ ಕಣ್ಣಿನ ಆಸ್ಪತ್ರೆಯಲ್ಲಿ ಶಸ್ತ್ರ ಚಿಕಿತ್ಸೆ ಮಾಡಲಾಗುವುದು ಎಂದು ಲಯನ್ಸ್ ಪ್ರಕಟಣೆ ತಿಳಿಸಿದೆ.

## ವಾಗೀಶಸ್ವಾಮಿ ಹಿರೇಮಠಗೆ ಪಿಹೆಚ್‌ಡಿ



ಹರಿಹರ, ಜ. 12- ಇಲ್ಲಿನ ವಾಗೀಶ ಸ್ವಾಮಿ ಹಿರೇಮಠ ಇವರಿಗೆ ಹಂಪಿ ವಿಶ್ವವಿದ್ಯಾಲಯದ ನುಡಿ ಹಬ್ಬ - 32ನೇ ಘಟಿಕೋತ್ಸವದಲ್ಲಿ ಪಿಹೆಚ್‌ಡಿ ಪದವಿ ನೀಡಿದೆ.

ಹಾಸನದ ಡಾ. ಕೆ.ಜಿ. ಕವಿತಾ ಅವರ ಮಾರ್ಗದರ್ಶನದಲ್ಲಿ ವಾಗೀಶ ಸ್ವಾಮಿ ಹಿರೇಮಠ ಅವರು ಮಂಡಿಸಿರುವ 'ಪ್ರಗತಿಶೀಲ ಕನ್ನಡ ಸಣ್ಣ ಕಥೆಗಳಲ್ಲಿ ಮಾನವೀಯ ಸಂವೇದನೆಯ ಸ್ವರೂಪ' ವಿಷಯ ಕುರಿತ ಮಹಾ ಪ್ರಬಂಧಕ್ಕೆ ಪಿಹೆಚ್‌ಡಿ ಪದವಿ ನೀಡಿದೆ.

ವಾಗೀಶ ಸ್ವಾಮಿ, ಸ್ಥಳೀಯ ಮುದೇನೂರು ಹಿರೇಮಠದ ನಾಗರಾಜಸ್ವಾಮಿ ಮತ್ತು ಶ್ರೀಮತಿ ಮಲ್ಲಮ್ಮ ದಂಪತಿ ಪುತ್ರ.

# ಅಂಬಿಗರ ಚೌಡಯ್ಯನವರ ಶರಣ ಸಂಸ್ಕೃತಿ ಉತ್ಸವ

ದಾವಣಗೆರೆ, ಜ.12- ಹಾವೇರಿ ಜಿಲ್ಲೆ ನರಸೀಪುರ ಕ್ಷೇತ್ರದಲ್ಲಿರುವ ಶ್ರೀ ನಿಜಶರಣ ಅಂಬಿಗರ ಚೌಡಯ್ಯನವರ ಗುರುಪೀಠದಲ್ಲಿ ಶ್ರೀ ನಿಜಶರಣ ಅಂಬಿಗರ ಚೌಡಯ್ಯನವರ 6ನೇ ಶರಣ ಸಂಸ್ಕೃತಿ ಉತ್ಸವ, ವಚನ ಗ್ರಂಥ ಮಹಾರಥೋತ್ಸವ, ತೊಟ್ಟಿಲೋತ್ಸವ, ಶ್ರೀಗಳ ಪೀಠಾರೋಹಣ ವಾರ್ಷಿಕ ಮಹೋತ್ಸವ, ಸಾಮೂಹಿಕ ವಿವಾಹ ಮಹೋತ್ಸವ ಕಾರ್ಯಕ್ರಮಗಳು ನಾಡಿದ್ದು ದಿನಾಂಕ 14 ಹಾಗೂ 15ರಂದು ನಡೆಯಲಿವೆ.

ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಗುರುಪೀಠದ ಉಪಾಧ್ಯಕ್ಷ ಟಿ.ಮಂಜುನಾಥ ಪುಟಗನಾಳು, ದಿನಾಂಕ 14ರ ಭಾನುವಾರ ಬೆಳಿಗ್ಗೆ 6 ಗಂಟೆಗೆ ತೊಟ್ಟಿಲೋತ್ಸವ, ಸಂಜೆ 5.30ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮಗಳ ಉದ್ಘಾಟನೆ ನಡೆಯಲಿದೆ. ನಂತರ ಶ್ರೀ ಗುರುಪೀಠ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಹೋಗದಲ್ಲಿ ಕಲಾ ತಂಡಗಳಿಂದ ರಾತ್ರಿ ಕಾರ್ಯಕ್ರಮಗಳು ಹಾಗೂ ಗುರು ಪೀಠದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ನಡೆಯಲಿದೆ.

ದಿ.15ರ ಬೆಳಿಗ್ಗೆ 8 ಗಂಟೆಗೆ ಧರ್ಮ ಧ್ವಜಾರೋಹಣ, 8.30ಕ್ಕೆ ಸಾಮೂಹಿಕ ಸರಳ ವಿವಾಹ ಮಹೋತ್ಸವ, 9.30ಕ್ಕೆ ನಾಡಿನ ವಿವಿಧ ಮಠಾಧೀಶರ ಸಮ್ಮುಖದಲ್ಲಿ ಧರ್ಮಸಭೆ, 11.30ಕ್ಕೆ ಶ್ರೀ ನಿಜ ಶರಣ ಅಂಬಿಗರ ಚೌಡಯ್ಯನವರ 904ನೇ ಜಯಂತ್ಯುತ್ಸವ ಹಾಗೂ 5 ಗಂಟೆಗೆ ಗೋಧೂಳಿ ಸಮಯದಲ್ಲಿ ವಚನ ಗ್ರಂಥ ಮಹಾರಥೋತ್ಸವ ಜರುಗಲಿದೆ.

15ರಂದು ನಡೆಯುವ ಕಾರ್ಯಕ್ರಮದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ, ಸಚಿವ ಎಸ್. ಎಸ್. ಮಲ್ಲಿಕಾರ್ಜುನ್, ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಚಿವ ಶಿವಾನಂದ ಪಾಟೀಲ ಇತರರು ಆಗಮಿಸಲಿದ್ದಾರೆ.

**ಎಸ್ಟಿ ಸೌಲಭ್ಯ ನೀಡಲು ಆಗ್ರಹ:** ರಾಜ್ಯದಲ್ಲಿ 40 ಲಕ್ಷ ಜನಸಂಖ್ಯೆ ಇರುವ ನಮ್ಮ ಸಮಾಜವು ತುಳಿತಕ್ಕೊಳಗಾಗಿದ್ದು, 37 ಪರ್ಯಾಯ ಪದಗಳ ಜಾತಿಯಿಂದ ಗುರುತಿಸಿಕೊಂಡಿದೆ. ಸಮಾಜಕ್ಕೆ ಎಸ್ಟಿ ಮೀಸಲಾತಿ ನೀಡುವ ಮೂಲಕ ಸಮಾಜವನ್ನು ಮುಖ್ಯವಾಹಿನಿಗೆ ತರುವ ಕೆಲಸವನ್ನು ಸರ್ಕಾರ ಮಾಡಬೇಕು ಎಂದು ಅವರು ಒತ್ತಾಯಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಹನುಮಂತಪ್ಪ ನಿಟುವಳ್ಳಿ, ಹೆಚ್.ಕೆ. ಯೋಗರಾಜ್, ಮಂಜುನಾಥ ಗುತ್ತೂರು, ರವಿಕುಮಾರ್ ಬಿ.ಪಿ. ಉಪಸ್ಥಿತರಿದ್ದರು.


## ಮಾಗಾನಹಳ್ಳಿ ನಿಜಾನಂದ ನಿಧನಕ್ಕೆ ಅಥಣಿ ವೀರಣ್ಣ ಸಂತಾಪ



ದಾವಣಗೆರೆ,ಜ.12- ನಗರದ ಹಿರಿಯ ವರ್ತಕ ಮಾಗಾನಹಳ್ಳಿ ಹೆಚ್. ನಿಜಾನಂದ ಅವರ ನಿಧನಕ್ಕೆ ಹಿರಿಯ ಕೈಗಾರಿಕೋದ್ಯಮಿ ಅಥಣಿ ಎಸ್. ವೀರಣ್ಣ ಶೋಕ ವ್ಯಕ್ತಪಡಿಸಿದ್ದಾರೆ.

ಆಡು ಮುಟ್ಟದ ಸೊಪ್ಪಿಲ್ಲ ಎಂಬಂತೆ ಮಾಗಾನಹಳ್ಳಿ ನಿಜಾನಂದ ಅವರು ಕೈ ಹಾಕದ ಕ್ಷೇತ್ರವಿಲ್ಲ. ಶ್ರೀ ವಿನಾಯಕ ಎಜುಕೇಷನ್ ಟ್ರಸ್ಟ್ ಉಪಾಧ್ಯಕ್ಷರಾಗಿದ್ದ ನಿಜಾನಂದ ಅವರು ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ ಸೇರಿದಂತೆ, ಅನೇಕ ಸಾಮಾಜಿಕ ಸಂಘಟನೆಗಳಲ್ಲಿ ತಮ್ಮನ್ನು ತೊಡಗಿಸಕೊಂಡಿದ್ದರು. ಸರ್ಕಾರಿ ನೌಕರಿಯಲ್ಲಿದ್ದ ನಿಜಾನಂದ ಅವರು, ಜೀವನದಲ್ಲಿ ಏನಾದರೂ ಹೊಸದನ್ನು ಸಾಧಿಸಬೇಕೆನ್ನುವ ಮಹತ್ವಾಕಾಂಕ್ಷಿಯನ್ನು ಹೊಂದಿ, ಸುಮಾರು 60 ವರ್ಷಗಳ ಕೆಳಗೆ ಸಣ್ಣ ಅಂಗಡಿಯನ್ನು ತೆರೆಯುವ ಮೂಲಕ ತಮ್ಮ ವ್ಯಾಪಾರಿ ವೃತ್ತಿಯನ್ನು ಆರಂಭಿಸಿದರು. ಅದೀಗ ದೊಡ್ಡ ಪ್ರಮಾಣದಲ್ಲಿ ಬೆಳೆಯಿತು. 1974ರಲ್ಲಿ ಮಾಗಾನಹಳ್ಳಿ ವಸ್ತು ಭಂಡಾರ ಎಂಬ ಹೆಸರಿನಲ್ಲಿ ವಿನೂತನ ಮಾದರಿಯಲ್ಲಿ ಒಂದೇ ಸೂರಿನಲ್ಲಿ ಎಲ್ಲಾ ಅವಶ್ಯಕ ವಸ್ತುಗಳೂ ಸಿಗುವಂತಹ ವ್ಯವಸ್ಥೆ ಮಾಡಿದ್ದು, ಗ್ರಾಹಕರಿಗೆ ಕಡಿಮೆ ದರದಲ್ಲಿ ಉತ್ತಮ ಗುಣಮಟ್ಟದ ವಸ್ತುಗಳನ್ನು ಒದಗಿಸುವ ವ್ಯವಸ್ಥೆ ಮಾಡಿದ್ದು ಸಾಹಸದ ಕಾರ್ಯವಾಗಿತ್ತು ಎಂದು ಅಥಣಿ ವೀರಣ್ಣ ತಿಳಿಸಿದ್ದಾರೆ.

## ರಾಮಗೊಂಡನಹಳ್ಳಿಯಲ್ಲಿ ಇಂದಿನಿಂದ ಶಿವಸಂಚಾರ ತಂಡದಿಂದ ನಾಟಕೋತ್ಸವ



ದಾವಣಗೆರೆ ತಾಲ್ಲೂಕಿನ ರಾಮಗೊಂಡನಹಳ್ಳಿ ಗ್ರಾಮದಲ್ಲಿ ಸಾಣೇಹಳ್ಳಿಯ ಶಿವಸಂಚಾರ ತಂಡದಿಂದ ಇಂದು ಮಧ್ಯಾಹ್ನದಿಂದ ನಾಟಕಗಳು ಪ್ರದರ್ಶನಗೊಳ್ಳಲಿವೆ.

**ನಾಟಕಗಳು :** 'ಜತೆಗಿರುವನು ಚಂದಿರ', ರಚನೆ : ಜಯಂತ ಕಾಯ್ಕಿಣಿ, 'ತಾಳಿಯ ತಕರಾರು', ರಚನೆ : ಕೆ. ಎನ್. ಸಾಳುಂಕೆ, 'ಕಲ್ಯಾಣದ ಬಾಗಿಲು', ರಚನೆ : ಡಾ. ನಟರಾಜ್ ಬೂದಾಳು.

## ಅಹಿಂದ ಪ್ರಧಾನ ಕಾರ್ಯದರ್ಶಿಯಾಗಿ ರವಿ



ದಾವಣಗೆರೆ, ಜ. 12 - ತಾಲ್ಲೂಕು ಅಹಿಂದ ಪ್ರಧಾನ ಕಾರ್ಯದರ್ಶಿಯಾಗಿ 'ದಾವಣಗೆರೆ ಕನ್ನಡಿಗ' ಸಂಪಾದಕ ಆರ್.ರವಿ ನೇಮಕಗೊಂಡಿದ್ದಾರೆ.

'ಅಹಿಂದ' ಸಮಾಜವನ್ನು ಸಾಮಾಜಿಕ, ಶೈಕ್ಷಣಿಕ, ರಾಜಕೀಯವಾಗಿ ಸದೃಢ ಮತ್ತು ಬಲಿಷ್ಠ ಮಾಡಲು ಶಿಕ್ಷಣ ಸಂಸ್ಥೆ, ಶಾಲೆಗಳು ಹಾಗೂ ಬ್ಯಾಂಕುಗಳು ಸ್ಥಾಪಿಸುವ ಗುರಿಯನ್ನು ಈ ಸಂಘಟನೆ ಹೊಂದಿದೆ ಎಂದು ಅಹಿಂದ ಕರ್ನಾಟಕ ರಾಜ್ಯ ಸಂಘಟನೆ ಅಧ್ಯಕ್ಷ ಪ್ರಭುಲಿಂಗ ದೊಡ್ಡಿನಿ ತಿಳಿಸಿದ್ದಾರೆ.

## ನಗರದಲ್ಲಿ ಇಂದು ಎ.ಸಿ.ಎಂ. ಶಾಲೆಯ ವಾರ್ಷಿಕೋತ್ಸವ

ಎ.ಸಿ.ಎಂ. ಸ್ಕೂಲ್‌ನ 18ನೇ ವಾರ್ಷಿಕೋತ್ಸವ ಸಮಾರಂಭ ಇಂದು ಬೆಳಿಗ್ಗೆ 10 ಗಂಟೆಗೆ ಗುಂಡಿ ಮಹಾದೇವಪ್ಪ ಕಲ್ಯಾಣ ಮಂಟಪದಲ್ಲಿ ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮದ ಸಾನ್ನಿಧ್ಯವನ್ನು ಶ್ರೀ ಓಂಕಾರ ಶಿವಾಚಾರ್ಯ ಮಹಾಸ್ವಾಮೀಜಿ ವಹಿಸುವರು. ಅಧ್ಯಕ್ಷತೆಯನ್ನು ತ್ಯಾವಣಗಿ ವೀರಭದ್ರಸ್ವಾಮಿ ವಹಿಸುವರು. ಮುಖ್ಯ ಅತಿಥಿಗಳಾಗಿ ಬಿ.ಎಂ. ದಾರುಕೇಶ್, ಎನ್. ಮಲ್ಲಯ್ಯ, ಎಸ್.ಎಂ. ಮಂಜುನಾಥಸ್ವಾಮಿ ಆಗಮಿಸುವರು.

## ಇಂದು ಶಿವಗೋಷ್ಠಿ

ಶಿವಗೋಷ್ಠಿ ಸಮಿತಿ, ಶ್ರೀ ಶಿವಕುಮಾರ ಸ್ವಾಮಿ ಮಹಾಮಂಟಪ ಹಾಗೂ ಸಾದರ ನೌಕರರ ಬಳಗ ಇವರ ಸಹಯೋಗದಲ್ಲಿ ಶಿವಗೋಷ್ಠಿ ಕಾರ್ಯಕ್ರಮವು ಇಂದು ಸಂಜೆ 6.30 ಕ್ಕೆ ತರಳಬಾಳು ಬಡಾವಣೆಯ ಶ್ರೀ ಶಿವಕುಮಾರಸ್ವಾಮಿ ಮಹಾಮಂಟಪದಲ್ಲಿ ನಡೆಯಲಿದೆ. ಅಧ್ಯಕ್ಷತೆಯನ್ನು ಎಂ.ಬಿ.ಸಂಗಮೇಶ್ವರ ಗೌಡ್ರು ವಹಿಸುವರು. ಸಾಹಿತಿ ಡಾ. ಆನಂದ ಋಗ್ವೇದಿ ಅವರು 'ಸಾಹಿತ್ಯ ಮತ್ತು ಸಾಮಾಜಿಕ ನೈತಿಕತೆ' ವಿಷಯ ಕುರಿತು ಉಪನ್ಯಾಸ ನೀಡುವರು. ಹಾರೋಸಾಗರ ನಿವೃತ್ತ ಶಿಕ್ಷಕ ಲಿಂ. ಶರಣ ವೈ. ವೀರಪ್ಪ ಸ್ಮರಣೆ ನಡೆಯಲಿದೆ. ಲಿಂಗೈಕ್ಯರ ಸ್ಮರಣೆಯನ್ನು ಎಸ್.ಬಿ. ಬಣಕಾರ್ ನಡೆಸಿಕೊಡುವರು.

## ಕಮ್ಮ ಕ್ರೀಡೋತ್ಸವಕ್ಕೆ ಎಸ್ಸೆಸ್ ಚಾಲನೆ



ದಾವಣಗೆರೆ, ಜ. 12 - ಕಮ್ಮವಾರಿ ಸಂಘದಿಂದ ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಸಂಘದ ಅಧ್ಯಕ್ಷ ಮೇಕಾ ಮುರುಳಿಕೃಷ್ಣ ನೇತೃತ್ವದಲ್ಲಿ ಆಯೋಜಿಸಿರುವ ಎರಡು ದಿನಗಳ ದಾವಣಗೆರೆ, ಶಿವಮೊಗ್ಗ ಜಿಲ್ಲಾ ಯುವ ಕಮ್ಮ ಕ್ರೀಡೋತ್ಸವಕ್ಕೆ ಶಾಸಕ ಶಾಮನೂರು ಶಿವಶಂಕರಪ್ಪ ಶುಕ್ರವಾರ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಕಮ್ಮವಾರಿ ಸಂಘದ ಪದಾಧಿಕಾರಿಗಳು, ಸಮಾಜ ಬಾಂಧವರು, ದಾವಣಗೆರೆ, ಶಿವಮೊಗ್ಗ ಜಿಲ್ಲೆಯಿಂದ ಆಗಮಿಸಿರುವ ಸಮಾಜದ ಕ್ರೀಡಾಪಟುಗಳು ಉಪಸ್ಥಿತರಿದ್ದರು.

## ನಗರಕ್ಕೆ ನಾಳೆ ಸಾತಿ ಸುಂದರೇಶ್



ದಾವಣಗೆರೆ, ಜ. 12- ಭಾರತ ಕಮ್ಯುನಿಸ್ಟ್ ಪಕ್ಷದ ರಾಜ್ಯ ಕಾರ್ಯದರ್ಶಿ ಕಾಂ. ಸಾತಿ ಸುಂದರೇಶ್ ನಾಡಿದ್ದು ದಿನಾಂಕ 14ರ ಭಾನುವಾರ ನಗರಕ್ಕೆ ಆಗಮಿಸಲಿದ್ದಾರೆ ಎಂದು ಸಿಪಿಐ ಜಿಲ್ಲಾ ಕಾರ್ಯದರ್ಶಿ ಕಾಂ. ಆವರಗೆರೆ ಚಂದ್ರು ತಿಳಿಸಿದ್ದಾರೆ.

ಅಂದು ಬೆಳಿಗ್ಗೆ 11.30ಕ್ಕೆ ಕಾಂ. ಪಂಪಾಪತಿ ಭವನದಲ್ಲಿ ಏರ್ಪಾಡಾಗಿರುವ ನಿವೇಶನ ಮತ್ತು ವಸತಿ ರಹಿತರ ಕಾರ್ಯಾಗಾರವನ್ನು ಅವರು ಉದ್ಘಾಟಿಸುವರು.

## ನಗರದಲ್ಲಿ ಇಂದು ಅಕ್ಕಿ ಸಮರ್ಪಣೆ



ಶ್ರೀ ಕ್ಷೇತ್ರ ಧರ್ಮಸ್ಥಳಕ್ಕೆ ಅನ್ನ ಸಂತರ್ಪಣೆ ಗಾಗಿ ಕಳುಹಿಸಿಕೊಡುವ 24ನೇ ವರ್ಷದ ಅಕ್ಕಿ ಸಮರ್ಪಣೆಯ ಪೂಜೆ ಮತ್ತು ಶ್ರೀ ಮಂಜುನಾಥ ಸ್ವಾಮಿ ಪೂಜಾ ಕಾರ್ಯಕ್ರಮವನ್ನು ಇಂದು ಸಂಜೆ 6 ಗಂಟೆಗೆ ಹಮ್ಮಿಕೊಳ್ಳಲಾಗಿದೆ. ಸಂಜೆ 6 ಗಂಟೆಗೆ ಸಂಗೀತ ಕಾರ್ಯಕ್ರಮ ನಡೆಯಲಿದ್ದು, ಸಂಜೆ 6.30 ಕ್ಕೆ ಪೂಜೆ 7.20 ಕ್ಕೆ ಪ್ರಸಾದ ಕಾರ್ಯ ಕ್ರಮವನ್ನು ಕೆ.ಬಿ. ಬಡಾವಣೆಯ ಕೆನರಾ ಬ್ಯಾಂಕ್ ಹಿಂಭಾಗದಲ್ಲಿರುವ ಓಂ ಶ್ರೀ ಮಂಜುನಾಥಸ್ವಾಮಿ ನಿವಾಸದಲ್ಲಿ ಹಮ್ಮಿಕೊಳ್ಳಲಾಗಿದೆ. ಅಣಬೇರಿನ ಶ್ರೀಮತಿ ಲಿಂ. ದ್ಯಾಮಮ್ಮನವರು ಮತ್ತು ಲಿಂ. ದೇವೇಂದ್ರಪ್ಪನವರ ಮಗ ಅಣಬೇರು ಮಂಜಣ್ಣ, ಲತಾ ಮಂಜಣ್ಣ ಮತ್ತು ಮಕ್ಕಳು, ಮೊಮ್ಮಕ್ಕಳು ಕಾರ್ಯಕ್ರಮದ ಸೇವಾ ಕರ್ತರಾಗಿದ್ದಾರೆ.

# ಸ್ಪರ್ಧಾ ಮನೋಭಾವ ಬೆಳೆಸಿಕೊಂಡರೆ ಸಾಧನೆ ಸಾಧ್ಯ

## ಅತ್ತಿಗೆರೆ : 'ಎಸ್‌ಸಿಎಸ್‌ಜಿ ವೈಭವ್' ಕಾರ್ಯಕ್ರಮದಲ್ಲಿ ಡಿಡಿಪಿಐ ಜಿ. ಕೊಟ್ರೇಶ್



ದಾವಣಗೆರೆ, ಜ. 12- ವಿದ್ಯಾರ್ಥಿಗಳು ತಮ್ಮ ವಿದ್ಯಾಭ್ಯಾಸದ ಅವಧಿಯಲ್ಲಿ ಸಕಾರಾತ್ಮಕ ಸ್ಪರ್ಧಾ ಮನೋಭಾವ ಬೆಳೆಸಿಕೊಂಡಲ್ಲಿ ಉದ್ದೇಶಿತ ಗುರಿ ಸಾಧಿಸಬಹುದೆಂದು ಜಿಲ್ಲಾ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಉಪನಿರ್ದೇಶಕ ಜಿ. ಕೊಟ್ರೇಶ್ ಪ್ರತಿಪಾದಿಸಿದರು.

ಇಲ್ಲಿಗೆ ಸಮೀಪದ ಅತ್ತಿಗೆರೆ ಗ್ರಾಮದ ಶ್ರೀಮತಿ ಚನ್ನಪ್ಪ ಶಿವಲಿಂಗಮ್ಮ ಗುರುಬಸಪ್ಪ ಕಲಾ ಮತ್ತು ವಾಣಿಜ್ಯ ಪದವಿ ಪೂರ್ವ ಕಾಲೇಜಿನ ಎಸ್‌ಸಿಎಸ್‌ಜಿ ವೈಭವ್-2023-24 ರ ವಾರ್ಷಿಕೋತ್ಸವ ಹಾಗೂ ಅಭಿನಂದನಾ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ವಿದ್ಯಾರ್ಥಿಗಳು ಸತತ ಅಧ್ಯಯನಶೀಲರಾಗಿ, ಮಾನಸಿಕ ಸ್ಥಿಮಿತತೆಯನ್ನು ಕಾಪಾಡಿಕೊಳ್ಳಬೇಕು. ಗುರಿ ಸಾಧನೆಯಲ್ಲಿ ಯಾವುದಕ್ಕೂ ವಿಚಲಿತರಾಗದೆ ಛಲದಿಂದ ಪ್ರಯತ್ನಶೀಲರಾಗಿ ಜ್ಞಾನ ಸಂಪಾದಿಸುವುದು ಅಗತ್ಯ. ನಿಮ್ಮ ಆಪ್ತರಿಂದ, ಸುತ್ತ ಮುತ್ತಲ ಹಲವಾರು ಜನರನ್ನು ನಿರುತ್ಸಾಹಗೊಳಿಸಲು ಹಾಗೂ ದಾರಿ ತಪ್ಪಿಸಲು ಪ್ರಯತ್ನಿಸುತ್ತಾರೆ. ಮನಸ್ಸನ್ನು ಘಾಸಿಗೊಳಿಸಲು ವ್ಯಕ್ತಿಗಳ ನಿಂದನೆಗಳಿಗೆ ಕಿವಿಗೊಡದೆ ಸಾಧನೆಯ ಮೆಟ್ಟಿಲು ತಲುಪಬೇಕು. ನಿಮಗೆ ಈಗ ಅನಂತ ಶಿಕ್ಷಣ ಸೌಲಭ್ಯಗಳು, ಮಾಹಿತಿಗಳು ಲಭ್ಯವಿವೆ. ಅವುಗಳನ್ನು ಸದ್ಬಳಕೆ ಮಾಡಿಕೊಂಡು ಪ್ರಯತ್ನಿಸಿದರೆ ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಅವಕಾಶಗಳು ದೊರೆಯುತ್ತವೆ. ಜೀವನದಲ್ಲಿ ಉತ್ತಮ ಸ್ಥಾನಮಾನ ಗಳಿಸಿ ಸಮಾಜದ ಅಸಹಾಯಕರ, ಸಮಾಜದ ಸೇವೆ ಮಾಡುವಂತಾದರೆ ಅದೇ ನಿಜವಾದ ದೇಶ ಸೇವೆ ಎಂದು ತಿಳಿಸಿದರು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಡಾ|| ಜೆ.ಬಿ. ರಾಜು ಮಾತನಾಡಿ, ವಿದ್ಯಾರ್ಥಿಗಳು ಜೀವನ ದಲ್ಲಿ ಸಾಧಿಸುವಾಗ ಏಳು-ಬೀಳುಗಳನ್ನು ಗಮನದಲ್ಲಿಟ್ಟುಕೊಂಡು ಅಧ್ಯಯನಶೀಲರಾಗ ಬೇಕು. ಮೌಂಟ್ ಎವರೆಸ್ಟ್ ಶಿಖರ ಏರಿದ ತೇನ್ ಸಿಂಗ್‌ಗೆ ತಾಯಿಯ ಪ್ರೇರಣೆ, ಪ್ರೋತ್ಸಾಹವೇ ಕಾರಣ. ಥಾಮಸ್ ಆಳ್ವ ಎಡಿಸನ್ ತನ್ನ ತಾಯಿಯ ಸಕಾರಾತ್ಮಕ ಮಾತುಗಳಿಂದ, ಮಾರ್ಗದರ್ಶನದಿಂದ ಮನೆಯಲ್ಲಿಯೇ ಅಧ್ಯಯನ ಮಾಡಿ ಅದ್ಭುತ ಸಂಶೋಧನೆ ಮಾಡಿ ಶ್ರೇಷ್ಠ ವಿಜ್ಞಾನಿಯಾದರು. ಒಳ್ಳೆಯ ಸುಸಂಸ್ಕೃತ ತಂದೆ- ತಾಯಿಗಳಿಂದ ಮಕ್ಕಳ ಭವಿಷ್ಯ ಭವ್ಯವಾಗಿ ಬೆಳಗುತ್ತದೆ ಎಂಬುವುದಕ್ಕೆ ಇಂತಹ ಅನೇಕ ಸಾಧಕರ ಜೀವನವನ್ನು ಕಾಣುತ್ತೇವೆ. ಆದ್ದರಿಂದ ತಂದೆ-ತಾಯಿ ನಿಜವಾದ ದೇವರು. ವಯಸ್ಸಾದ ನಂತರ ಅವರನ್ನು ಕಡೆಗಣಿಸಬಾರದು ಎಂದು ಕಿವಿಮಾತು ಹೇಳಿದರು.

ಶ್ರೀ ಅರವಿಂದ ವಿದ್ಯಾಸಂಸ್ಥೆಯ ಸಂಸ್ಥಾಪಕ ಗೌರವ ಕಾರ್ಯದರ್ಶಿ ಪ್ರೊ. ಕೆ.ಆರ್.ಸಿದ್ದಪ್ಪ ಭಾರತದ ಭವ್ಯತೆ ಬಗ್ಗೆ ತಿಳಿಸಿ, ಚಂದ್ರಯಾನ 3 ನೌಕಾಯಾನ ಹಾಗೂ ಸೂರ್ಯನ ತಾಪಮಾನ ಅಧ್ಯಯನಕ್ಕೆ ಆದಿತ್ಯ 11 ನೌಕೆಗಳನ್ನು ಇಸ್ರೋದಿಂದ ಕಳುಹಿಸಿದ ಸಾಧನೆಗಳನ್ನು ಗಮನದಲ್ಲಿಟ್ಟುಕೊಂಡು ಮುನ್ನಡೆಯಬೇಕೆಂದು ಹಿತ ನುಡಿದರು.

ಅಧ್ಯಕ್ಷತೆ ವಹಿಸಿದ್ದ ಅರವಿಂದ ವಿದ್ಯಾಸಂಸ್ಥೆಯ ಅಧ್ಯಕ್ಷ ಪ್ರೊ. ಹೆಚ್. ಚನ್ನಪ್ಪ ಪಲ್ಲಾಗಟ್ಟೆ ಮಾತನಾಡಿ, ವಿದ್ಯಾರ್ಥಿ ಜೀವನದಲ್ಲಿ ಶಿಸ್ತು, ಸಮಯ ಪಾಲನೆ ಮತ್ತು ಪ್ರಾಮಾಣಿಕತೆಯನ್ನು ಮೈಗೂಡಿಸಿಕೊಂಡು ಯಶಸ್ಸನ್ನು ಗಳಿಸುವುದರ ಜೊತೆಗೆ ನೆಮ್ಮದಿಯಿಂದ ಬದುಕಬೇಕು ಎಂದು ತಿಳಿಸಿದರು.

ಉಪನ್ಯಾಸಕ ಕೆ.ಎಂ. ಬಸವರಾಜಪ್ಪ, ಆರ್. ಶಿವಶಂಕರ್, ಡಿ. ಭೋಜರಾಜಪ್ಪ ಉಪಸ್ಥಿತರಿದ್ದರು. ವಿದ್ಯಾರ್ಥಿಗಳಾದ ಲತಾ ಮತ್ತು ಸಂಗಡಿಗರು ಪ್ರಾರ್ಥಿಸಿದರು. ಪ್ರಾಚಾರ್ಯ ಹೆಚ್. ಚಂದ್ರಪ್ಪ ಪ್ರಾಸ್ತಾವಿಕ ನುಡಿಗಳನ್ನಾಡಿದರು.

ಸುಭಾಷ್ ಆರ್. ಶಿಂಧೆ ಕಾರ್ಯಕ್ರಮ ನಿರ್ವಹಿಸಿದರು. ಎನ್.ಎಸ್. ಪರಮೇಶ್ವರಪ್ಪ ವಾರ್ಷಿಕ ವರದಿ ಮಂಡಿಸಿದರು. ಶ್ರೀಮತಿ ಸಲ್ಮಾ ಸ್ವಾಗತಿಸಿದರು. ಗುಡ್ಡಪ್ಪ ಆರ್. ಓಲೇಕಾರ ವಂದಿಸಿದರು. ಶ್ರೀಮತಿ ನಾಗವೇಣಿ ಮತ್ತು ಶ್ರೀಮತಿ ಸೌಮ್ಯ ಕ್ರೀಡಾ ಮತ್ತು ಸಾಂಸ್ಕೃತಿ ಕಾರ್ಯಕ್ರಮ ನಡೆಸಿಕೊಟ್ಟರು.



# ಗಣರಾಜ್ಯೋತ್ಸವಕ್ಕೆ ಪ್ಲಾಸ್ಟಿಕ್ ರಾಷ್ಟ್ರಧ್ವಜಗಳ ನಿಷೇಧ



ದಾವಣಗೆರೆ, ಜ.12 - ಇದೇ ದಿನಾಂಕ 26ರಂದು ನಡೆಯಲಿರುವ ಗಣರಾಜ್ಯೋತ್ಸವದಲ್ಲಿ ಪ್ಲಾಸ್ಟಿಕ್ ರಾಷ್ಟ್ರಧ್ವಜಗಳ ಮಾರಾಟ ಹಾಗೂ ಬಳಕೆ ಮಾಡುವುದನ್ನು ನಿಷೇಧಿಸಲಾಗಿದೆ ಎಂದು ಪರಿಸರ ಅಧಿಕಾರಿ ಡಾ.ಹೆಚ್.ಲಕ್ಷ್ಮಿಕಾಂತ್ ತಿಳಿಸಿದ್ದಾರೆ. ಪರಿಸರ ಸ್ನೇಹಿಯಾಗಿ ಆಚರಿಸಲು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಬೇಕು. ಪ್ಲಾಸ್ಟಿಕ್ ಧ್ವಜಗಳನ್ನು ಮಾರಾಟ ಮಾಡುವಂತಹ ಅಂಗಡಿಗಳು ಕಂಡುಬಂದರೆ ಅಂತಹವರ ವಿರುದ್ಧ ಪ್ಲಾಸ್ಟಿಕ್ ಅಧಿನಿಯಮ-2016 ಹಾಗೂ ಪರಿಸರ ಸಂರಕ್ಷಣಾ ಕಾಯ್ದೆ, 1986ರಡಿಯಲ್ಲಿ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಅವರು ಎಚ್ಚರಿಸಿದ್ದಾರೆ.

# ಶಂಕರಮ್ಮನ ಸ್ವಾವಲಂಬಿ ಬದುಕು ಶ್ಲಾಘನೀಯ



## ಬಾಡದ ಆನಂದರಾಜು

ದಾವಣಗೆರೆ, ಜ.12 - 'ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ' ಎನ್ನುವಂತೆ ಒಬ್ಬ ಮಹಿಳೆ ಹೋಟೆಲ್ ಉದ್ಯಮ ಪ್ರಾರಂಭಿಸಿ ಇಪ್ಪತ್ತು ಕುಟುಂಬಗಳಿಗೆ ಆಶ್ರಯದಾತರಾಗಿ ಯಶಸ್ಸು ಕಂಡಿರುವ ಶಂಕರಮ್ಮನವರ ಸಾಧನೆ ನಿಜಕ್ಕೂ ಶ್ಲಾಘನೀಯ ಎಂದು ಶೋಷಿತ ವರ್ಗಗಳ ಮುಖಂಡ ಬಾಡದ ಆನಂದರಾಜ್ ಶ್ಲಾಘಿಸಿದ್ದಾರೆ.

ನಗರದ ರಾಂ & ಕೋ ವೃತ್ತದ ಬಳಿಯಿರುವ ಶ್ರೀ ವೆಂಕಟೇಶ್ವರ ಖಾನಾವಳಿಯ ಮೂರನೇ ವಾರ್ಷಿಕೋತ್ಸವದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು. ಶಂಕರಮ್ಮನ ಧೈರ್ಯ ಮತ್ತು ಛಲ ಪ್ರತಿಯೊಬ್ಬ ಮಹಿಳೆ ಅಳವಡಿಸಿಕೊಂಡರೆ ಸ್ವಾವಲಂಬಿ ಬದುಕು ಸಾಗಿಸಿ, ಯಶಸ್ಸು ಕಾಣಬಹುದು ಎಂದರು. ಈ ಸಂದರ್ಭದಲ್ಲಿ ಶಂಕರಮ್ಮ ಅವರನ್ನು ಸನ್ಮಾನಿಸಲಾಯಿತು. ಮುಖಂಡ ಹನುಮನಹಳ್ಳಿ ಸಿದ್ದೇಶ್, ಮಹಿಳಾ ಮುಖಂಡರಾದ ರೇಖಾ, ವಿನಾಯಕ ಜೆ.ಕೆ. ಮುಂಡಾಸ್, ಅನಿಲ್ ಕುಮಾರ್, ಪ್ರತಿಭಾ ಬಿ.ಎಸ್. ದಾವಣಗೆರೆ ಮತ್ತಿತರರು ಉಪಸ್ಥಿತರಿದ್ದರು.

ಜಾಹೀರಾತು

## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 12.01.2024ರಂದು ಸಂಜೆ 4 ಗಂಟೆಗೆ ದೈವಾಧೀನರಾದ ಶ್ರೀ ವಿನಾಯಕ ಎಜುಕೇಷನ್ ಟ್ರಸ್ಟ್‌ನ ಉಪಾಧ್ಯಕ್ಷರೂ, ಆನಂದ ಹಾರ್ಡ್‌ವೇರ್ಸ್ ಅಂಡ್ ಪೇಂಟ್ಸ್‌ನ ಮಾಲೀಕರೂ ನಮ್ಮ ಸಂಬಂಧಿಕರೂ ಆಗಿರುವ

**ಶ್ರೀ ಮಾಗಾನಹಳ್ಳಿ ಹೆಚ್. ನಿಜಾನಂದ**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.

ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.


ಸವನೂರು ಕುಟುಂಬದವರಾದ ಎಸ್. ಎನ್. ರೇವಣಸಿದ್ದಪ್ಪ ಶ್ರೀಮತಿ ಶಕುಂತಲ ಮತ್ತು ಮಕ್ಕಳಾದ ಎಸ್.ಆರ್. ಸುರೇಶ್, ಎಸ್.ಆರ್. ಶಿವಕುಮಾರ್, ಎಸ್.ಆರ್. ಅರುಣ ಮತ್ತು ಕುಟುಂಬ ವರ್ಗದವರು



## ಬೃಹತ್ ಮಾರಾಟ ! ಭಾರೀ ಉಳಿತಾಯ !

FURNITURE & HOME INTERIOR EXPO

ಅತಿದೊಡ್ಡ ವಿನಿಮಯ ಮೇಳ ! ಭಾರೀ ವ್ಯವಹಾರ

SALE UP TO 70% off





ದಿನಾಂಕ & ಸ್ಥಳ 12 13 14 15 16 ಜನವರಿ 2024 | ಸಮಯ : ಬೆಳಿಗ್ಗೆ 10 ರಿಂದ 9 ರವರೆಗೆ

ಬಾಪೂಜಿ ಬ್ಯಾಂಕ್ ಸಮುದಾಯ ಭವನ, ಶಾಮನೂರು, ದಾವಣಗೆರೆ

| | | | | |
|---|---|---|---|---|
| ಮಾಡರ್ನ್ ಸೋಫಾ ಸೆಟ್ | ರಿಕ್ಲೈನರ್ ಸೋಫಾ ಕಾರ್ನರ್ ಸೋಫಾ ಸೆಟ್ | ಡೈನಿಂಗ್ ರೂಮ್ ಫರ್ನಿಚರ್ | ಇಟಾಲಿಯನ್ ಡಿಸೈನರ್ ಸೋಫಾಸ್ | ಆ್ಯಂಟಿಕ್ & ಐರನ್ ಫರ್ನಿಚರ್ |
| ಮಸಾಜ್ ಚೇರ್ | ಶೇಷಮ್ ವುಡ್ ಫರ್ನಿಚರ್ | ಕಾರ್ಪೆಟ್, ರಗ್ಸ್ & ಮ್ಯಾಟ್ರಸಸ್ | ಡೆಕೋರೇಟಿವ್ ಆರ್ಟ್ & ಹ್ಯಾಂಡಿಕ್ರಾಫ್ಟ್ಸ್ | ಕಾರ್ವ್ಡ್ ವುಡನ್ ಸ್ವಿಂಗ್ |

ವಿಶಾಲವಾದ ಕಾರು ಪಾರ್ಕಿಂಗ್ | ಪ್ರವೇಶ ಉಚಿತ | 91 96111 76669







ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ದಾವಣಗೆರೆ
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ದಾವಣಗೆರೆ

ದಾವಣಗೆರೆ ದಕ್ಷಿಣ ವಿಧಾನ ಸಭಾ ಕ್ಷೇತ್ರದ
ಮಾನ್ಯ ಜನಪ್ರಿಯ ಶಾಸಕರು ಹಾಗೂ ಮಾಜಿ ಸಚಿವರಾದ

**ಡಾ. ಶಾಮನೂರು ಶಿವಶಂಕರಪ್ಪನವರ**

ಶಿಫಾರಸ್ಸಿನ ಮೇರೆಗೆ 2022-23ನೇ ಸಾಲಿನ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅನುದಾನದಡಿ 4225-04-102-0-01 (386) ಅಲ್ಪಸಂಖ್ಯಾತರ ಕಾಲೋನಿಗಳ ರಸ್ತೆ ಅಭಿವೃದ್ಧಿ ಕಾಮಗಾರಿ



ಶ್ರೀ ಜಿ.ಡಿ. ಪ್ರಕಾಶ್
ಮಹಾನಗರ ಪಾಲಿಕೆ ಸದಸ್ಯರು

## ಭೂಮಿ ಪೂಜೆ ಕಾರ್ಯಕ್ರಮ

| ಕಾಮಗಾರಿಯ ಹೆಸರು | ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ |
|---|---|
| 01) ದಾವಣಗೆರೆ 1ನೇ ವಾರ್ಡಿನ ಮೌಲಾನಾ ಅಜಾದ್ ಭವನದಿಂದ ಬೂದಾಳ ರಸ್ತೆಗೆ ಕಾಂಕ್ರೀಟ್ ರಸ್ತೆ ನಿರ್ಮಾಣ. | 100.00 |

ಸ್ಥಳ : ಮೌಲಾನಾ ಅಜಾದ್ ಭವನ, ಬೂದಾಳ್ ರಸ್ತೆ, ದಾವಣಗೆರೆ
ದಿನಾಂಕ : 13.01.2024, ಸಮಯ : ಮಧ್ಯಾಹ್ನ 1.30 ಗಂಟೆ



ಪ್ರವೀಣ್ ಕುಮಾರ್
ಕಾಂಗ್ರೆಸ್ ಯುವ ಮುಖಂಡರು

ಈ ಕಾಮಗಾರಿಯ ಭೂಮಿ ಪೂಜೆಗೆ ಆಗಮಿಸುತ್ತಿರುವ ಮಹಾಪೌರರು, ಸ್ಥಾಯಿ ಸಮಿತಿ ಅಧ್ಯಕ್ಷರುಗಳು, ಮಹಾನಗರ ಪಾಲಿಕೆ ಎಲ್ಲಾ ಸದಸ್ಯರು, ಆಯುಕ್ತರು, ಕಾಂಗ್ರೆಸ್ ಪಕ್ಷದ ಮುಖಂಡರುಗಳಿಗೂ, ಕಾರ್ಯಕರ್ತರಿಗೂ, ಅಭಿಮಾನಿಗಳಿಗೂ ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದ ಅಧಿಕಾರಿಗಳಿಗೂ ಹೃದಯಪೂರ್ವಕ ಸ್ವಾಗತ, ಸುಸ್ವಾಗತ


## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 12.01.2024ರ ಶುಕ್ರವಾರ ನಿಧನರಾದ
ಆನಂದ ಹಾರ್ಡ್‌ವೇರ್ಸ್ ಅಂಡ್ ಪೇಂಟ್ಸ್ ಮಾಲೀಕರೂ
ಛೇಂಬರ್ ಆಫ್ ಕಾಮರ್ಸ್ ಉಪಾಧ್ಯಕ್ಷರೂ,
ವಿನಾಯಕ ಎಜ್ಯುಕೇಶನ್ ಟ್ರಸ್ಟ್ ಉಪಾಧ್ಯಕ್ಷರೂ
ಅಭಿನವ ರೇಣುಕಾ ಮಂದಿರದ ಟ್ರಸ್ಟಿಗಳೂ ಆದ

**ಮಾಗಾನಹಳ್ಳಿ ನಿಜಾನಂದಪ್ಪ**

ಅವರಿಗೆ ನಮ್ಮೆಲ್ಲರ ಭಾವಪೂರ್ಣ ಶ್ರದ್ಧಾಂಜಲಿ.

ಇವರ ನಿಧನಕ್ಕೆ ಸಂತಾಪ ವ್ಯಕ್ತಪಡಿಸುತ್ತಾ ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

ಬಿ.ಸಾವಿತ್ರಿದೇವಿ, ಪಾಲುದಾರರು ಮತ್ತು ಸಿಬ್ಬಂದಿ ವರ್ಗ.
ಆನಂದ ಹಾರ್ಡ್‌ವೇರ್ಸ್ ಅಂಡ್ ಪೇಂಟ್ಸ್, ಮಂಡಿಪೇಟೆ, ದಾವಣಗೆರೆ.

## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 12.01.2024ರಂದು ಸಂಜೆ 3 ಗಂಟೆಗೆ ದೈವಾಧೀನರಾದ
ಶ್ರೀ ವಿನಾಯಕ ಎಜುಕೇಷನ್ ಟ್ರಸ್ಟ್‌ನ ಉಪಾಧ್ಯಕ್ಷರಾದ

**ಶ್ರೀ ಎಂ.ಹೆಚ್. ನಿಜಾನಂದ**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.

ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

ಶ್ರೀ ಶ್ರೀಶೈಲ ಜಗದ್ಗುರು ವಾಗೀಶ ಪಂಡಿತಾರಾಧ್ಯ ಕೃಪಾಪೋಷಿತ
**ಶ್ರೀ ವಿನಾಯಕ ಎಜುಕೇಷನ್ ಟ್ರಸ್ಟ್ (ರಿ.)**
ಎಂ.ಸಿ.ಸಿ. 'ಬಿ' ಬ್ಲಾಕ್, ಎಸ್.ಎಸ್. ಲೇ ಔಟ್, ದಾವಣಗೆರೆ.

ಶ್ರೀ ಶ್ರೀ ಶ್ರೀ 1008 ಶ್ರೀಶೈಲ ಜಗದ್ಗುರು ಡಾ|| ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳವರು, ಅಧ್ಯಕ್ಷರು

✦ ಶ್ರೀ ಅಥಣಿ ವೀರಣ್ಣ, ಮ್ಯಾನೇಜಿಂಗ್ ಟ್ರಸ್ಟಿ ✦ ಶ್ರೀ ಎನ್.ಎ. ಮುರುಗೇಶ್, ಕಾರ್ಯದರ್ಶಿ

ಟ್ರಸ್ಟಿಗಳು :

✦ ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್ ✦ ಶ್ರೀ ಬಿ.ಸಿ. ಉಮಾಪತಿ ✦ ಶ್ರೀ ಆರ್. ರಮಾನಂದ
✦ ಶ್ರೀ ಆರ್. ವೆಂಕಟರೆಡ್ಡಿ ✦ ಶ್ರೀ ಕೆ.ಜಿ. ಸುಗಂಧರಾಜು ✦ ಶ್ರೀ ಬಿ.ಸಿ. ಶಿವಕುಮಾರ್
✦ ಶ್ರೀ ಎಂ. ಮಹೇಶ್ಚಂದ್ರಬಾಬು ✦ ಶ್ರೀ ಎಸ್.ಕೆ. ವೀರಣ್ಣ ✦ ಶ್ರೀ ಐ.ಪಿ. ಏಕೋರಾಮಾರಾಧ್ಯ
✦ ಶ್ರೀ ಎ.ಕೆ. ಪ್ರಶಾಂತ್ ✦ ಶ್ರೀ ಎಂ.ವಿ. ವೀರೇಂದ್ರ ✦ ಶ್ರೀ ಎ.ವಿ. ಪ್ರಸಾದ್ ✦ ಡಾ. ಹೆಚ್.ಬಿ. ಮೋಹನ್

ಶ್ರೀ ವಿನಾಯಕ ಎಜುಕೇಷನ್ ಟ್ರಸ್ಟ್ (ರಿ.)ನ ಆಶ್ರಯದಲ್ಲಿ ನಡೆಯುವ ಗುಂಡಿ ನರ್ಸರಿ ಶಾಲೆ, ಪಿ.ಎಸ್. ಪ್ರಾಥಮಿಕ ಶಾಲೆ, ಅಥಣಿ ಪ್ರೌಢಶಾಲೆ, ಅಥಣಿ ಸಂಯುಕ್ತ ಪದವಿ ಪೂರ್ವ ಕಾಲೇಜು, ಎಸ್.ಬಿ.ಸಿ ಪ್ರಥಮ ದರ್ಜೆ ಮಹಿಳಾ ಕಾಲೇಜು ಹಾಗೂ ಅಥಣಿ ಸ್ನಾತಕೋತ್ತರ ಕೇಂದ್ರ, ಬಿ.ಎಸ್. ಚನ್ನಬಸಪ್ಪ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರು, ಅಧ್ಯಾಪಕ ವೃಂದ, ಸಿಬ್ಬಂದಿ ವೃಂದ ಹಾಗೂ ವಿದ್ಯಾರ್ಥಿಗಳು-ವಿದ್ಯಾರ್ಥಿನಿಯರು